

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ

ವಿಧಾನ ಸಭಾ ಚುನಾವಣೆ ಕರ್ನಾಟಕ

# ಪ್ರಣಾಳಿಕೆ-2023

## ಮುಖ್ಯಾಂಶಗಳು

# ಸರ್ವ ಜನಾಂಗದ ಶಾಂತಿಯ ತೋಟ








## ಇದುವೇ ಕಾಂಗ್ರೆಸ್‌ನ ಬದ್ಧತೆ



# ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ

# ವಿಧಾನಸಭಾ ಚುನಾವಣೆ ಪ್ರಣಾಳಿಕೆ 2023

## ಸರ್ವಜನಾಂಗದ ಶಾಂತಿಯ ತೋಟ

## ಇದುವೇ ನಮ್ಮ ಬದ್ಧತೆ

ಎಲ್ಲರನ್ನೂ ಒಳಗೊಂಡ, ಸೌಹಾರ್ದಯುತ ಹಾಗೂ ವಿಶಿಷ್ಟ ಸಂಸ್ಕೃತಿಗಳ ರಾಷ್ಟ್ರವಾಗಿ ಭಾರತವನ್ನು ರೂಪುಗೊಳಿಸುವಲ್ಲಿ ಮಹಾತ್ಮಾ ಗಾಂಧಿ ನೇತೃತ್ವದಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ವಹಿಸಿದ ಪಾತ್ರವನ್ನು ನಮ್ಮ ದೇಶಬಾಂಧವರು ಮತ್ತು ಜಗತ್ತಿನಾದ್ಯಂತ ಜನರು ಅರಿತಿದ್ದಾರೆ.

ಪಂಡಿತ್ ಜವಾಹರಲಾಲ್ ನೆಹರೂ ಅವರು, ಸರ್ದಾರ್ ವಲ್ಲಭಭಾಯಿ ಪಟೇಲ್, ಡಾ.ರಾಜೇಂದ್ರ ಪ್ರಸಾದ್ ಮತ್ತು ಮೌಲಾನಾ ಅಬುಲ್ ಕಲಾಂ ಅಜಾದ್ ಇವರುಗಳ ಸಮರ್ಥ ಸಹಯೋಗದೊಂದಿಗೆ, ಭಾರತದಲ್ಲಿ ಪ್ರಜಾಪ್ರಭುತ್ವ ಪದ್ಧತಿಯ ಆಡಳಿತಕ್ಕೆ ಭದ್ರ ಬುನಾದಿ ಹಾಕಿಕೊಟ್ಟರು. ನ್ಯಾಯಾಂಗ, ಸೇನೆ, ಚುನಾವಣಾ ಆಯೋಗ, ಪಂಚವಾರ್ಷಿಕ ಯೋಜನೆಗಳು, ಸಾಹಿತ್ಯಕ ಸಂಸ್ಥೆಗಳಂತಹ ಹಲವು ಸ್ವಾಯತ್ತ ಸಂಸ್ಥೆಗಳು ಯಾವುದೇ ರಾಜಕೀಯ ಹಸ್ತಕ್ಷೇಪಗಳಿಗೆ ಒಳಗಾಗದಂತೆ ಅವುಗಳ ಸ್ವಾಯತ್ತತೆ ಮತ್ತು ಪಾವಿತ್ರ್ಯತೆಯನ್ನು ರಕ್ಷಿಸುವುದಕ್ಕೆ ನೆಹರೂ ಆಡಳಿತ ವ್ಯವಸ್ಥೆ ಅವಕಾಶ ಮಾಡಿಕೊಟ್ಟಿತು. ಡಾ.ಬಾಬಾಸಾಹೇಬ ಬಿ.ಆರ್.ಅಂಬೇಡ್ಕರ್ ಸಾವಿಧಾನಿಕ ಪರಿಷತ್ತಿನ ನಿರ್ದೇಶನದಲ್ಲಿ, ಈ ದೇಶಕ್ಕೆ ಅದ್ವಿತೀಯ ಸಂವಿಧಾನವನ್ನು ರೂಪಿಸಿಕೊಟ್ಟರು.

ಶ್ರೀಮತಿ ಇಂದಿರಾ ಗಾಂಧಿ ಅವರ ದೂರದೃಷ್ಟಿ ಹಾಗೂ ಬಡತನ ನಿರ್ಮೂಲನೆಯ ಪ್ರಬಲ ಬದ್ಧತೆಯಿಂದಾಗಿ, "ಗರೀಬಿ ಹಠಾವೋ' ಘೋಷಣೆ ಮೊಳಗಿತು ಹಾಗೂ ಹಲವಾರು ಆರ್ಥಿಕ ಕಾರ್ಯಕ್ರಮಗಳ ಮತ್ತು ರಾಜಕೀಯ ಸಬಲೀಕರಣಗಳ ಮೂಲಕ ಅವರು ಅದನ್ನು ಜಾರಿಗೆ ತಂದರು. ಬಡತನದ ನಿರ್ಮೂಲನಕ್ಕೆ ಪಣತೊಟ್ಟರು.

ಭಾರತದ ಸಂವಿಧಾನಕ್ಕೆ ಸೂಕ್ತ ತಿದ್ದುಪಡಿಗಳನ್ನು ತರುವ ಮೂಲಕ ಶ್ರೀ ರಾಜೀವ್ ಗಾಂಧಿ ಅವರು ಪ್ರಜಾಪ್ರಭುತ್ವ ವ್ಯವಸ್ಥೆಯು ತಳಮಟ್ಟದಲ್ಲೇ ಕಾರ್ಯನಿರ್ವಹಿಸುವಂತೆ ಮಾಡಿದರು. ಐಟಿ, ಟೆಲಿಕಾಂ, ನವಸಂಶೋಧನೆಗಳು, ಬಾಹ್ಯಾಕಾಶ ಸಂಶೋಧನೆಗಳಿಗೆ ಉತ್ತೇಜನ ಕೊಡುವುದಲ್ಲದೆ ಕೃಷಿ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ಕ್ರಾಂತಿಕಾರೀ ಬದಲಾವಣೆಗಳನ್ನು ತರುವುದರ ಮೂಲಕ ಶ್ರೀ ರಾಜೀವ್ ಗಾಂಧಿ ಅವರು ಭಾರತವನ್ನು ಆಧುನಿಕ ಜಗತ್ತಿಗೆ ಪರಿಚಯಿಸಿದ್ದರಿಂದ ಇಂದು ಇಡೀ ಜಗತ್ತು ಭಾರತವನ್ನು ಮಹಾನ್ ದೇಶವನ್ನಾಗಿ ಪರಿಗಣಿಸುವುದು ಸಾಧ್ಯವಾಯಿತು. ಶ್ರೀ ಪಿ.ವಿ.ನರಸಿಂಹ ರಾವ್ ಅವರು ರಾಜೀವ್ ಗಾಂಧಿ ಅವರು ಹಾಕಿಕೊಟ್ಟ ಹಾದಿಯಲ್ಲೇ ಸಾಗಿ ಆರ್ಥಿಕ ಉದಾರೀಕರಣ ಮತ್ತು ಸುಧಾರಣೆಗಳ ಮೂಲಕ ಈ ವ್ಯವಸ್ಥೆಯನ್ನು ಮತ್ತಷ್ಟು ಬಲಗೊಳಿಸಿದರು.

ದೇಶದಲ್ಲಿ ಆರ್ಥಿಕ ಅಭಿವೃದ್ಧಿ ಮತ್ತು ಸಮಗ್ರ ಬೆಳವಣಿಗೆಗಳನ್ನು ಮುನ್ನಲೆಗೆ ತಂದ ಡಾ.ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರಕಾರದ 10 ವರ್ಷಗಳ ಆಡಳಿತವು ಭಾರತದ ಪಾಲಿಗೆ ಸ್ವರ್ಣ ಯುಗವೇ ಸರಿ.

ಶ್ರೀಮತಿ ಸೋನಿಯಾ ಗಾಂಧಿ ಮತ್ತು ಶ್ರೀ ರಾಹುಲ್ ಗಾಂಧಿ ಅವರು, ನರೇಗ, ಶಿಕ್ಷಣದ ಹಕ್ಕು, ಭೂಮಿ ಕಳೆದುಕೊಳ್ಳುವವರಿಗೆ ಪರಿಹಾರದ ಹಕ್ಕು, ಅರಣ್ಯ ಉತ್ಪನ್ನಗಳ ಮಾಲೀಕತ್ವದ ಹಕ್ಕು, ಆಹಾರದ ಹಕ್ಕು ಮತ್ತು ಎಲ್ಲ ಫಲಾನುಭವಿಗಳಿಗೆ ನೇರವಾಗಿ ಬ್ಯಾಂಕ್ ಖಾತೆಗಳಿಗೆ ಹಣ ವರ್ಗಾವಣೆಯ ನಿಯಮಗಳನ್ನು ತಂದು ಭಾರತದ ಸಾಮಾಜಿಕ ಬದುಕಿನಲ್ಲಿ ಹೊಸ ಯುಗಕ್ಕೆ ಕಾರಣರಾದರು.

ಯುವ ಮತ್ತು ಪ್ರಬುದ್ಧ ನಾಯಕ ಶ್ರೀ ರಾಹುಲ್ ಗಾಂಧಿ ಅವರು ಇಂದು ಮಹಾತ್ಮಾ ಗಾಂಧಿ ಅವರ ತತ್ವಗಳನ್ನು ಅನುಸರಿಸುತ್ತ ರಾಷ್ಟ್ರೀಯ ಏಕತೆಯ ಮತ್ತು ನ್ಯಾಯಯುತ ಹೋರಾಟದ ಧ್ವನಿಯಾಗಿ ಬಹಳ ಎತ್ತರಕ್ಕೆ ಬೆಳೆದು ನಿಂತಿದ್ದಾರೆ. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ 3,700 ಕಿಲೋಮೀಟರ್‌ಗಳಷ್ಟು ಕಾಲ್ನಡಿಗೆಯಲ್ಲಿ ನಡೆದು, ಐತಿಹಾಸಿಕ ಭಾರತ ಜೋಡೊ ಯಾತ್ರೆಯ ಮೂಲಕ ದೇಶದ ಜನ ಸಂಕಟಕ್ಕೆ ಒಳಗಾಗುತ್ತಿರುವ ಬೆಲೆಏರಿಕೆ, ನಿರುದ್ಯೋಗ, ಸಂಪತ್ತಿನ ಹಂಚಿಕೆಯಲ್ಲಿ ತಾರತಮ್ಯ, ರಾಜಕೀಯ ದ್ವೇಷಗಳ ಮೂಲಕ ಛಿದ್ರವಾಗುತ್ತಿರುವ ದೇಶವನ್ನು ಒಗ್ಗೂಡಿಸುತ್ತಿದ್ದಾರೆ. ಅಲ್ಲದೆ ಅನಿಯಂತ್ರಿತ ಮತಾಂಧತೆಯನ್ನು ಮತ್ತು ಭ್ರಷ್ಟಾಚಾರವನ್ನು ದೇಶದ ಉದ್ದಗಲಕ್ಕೂ ಹರಡುತ್ತಿರುವ ಭಾಜಪಕ್ಕೆ ಸವಾಲಾಗಿ ನಿಂತಿದ್ದಾರೆ.

ಮುತ್ಸದ್ದಿ ಹಾಗೂ ಸಾರ್ವಜನಿಕ ಜೀವನದಲ್ಲಿ ತಮ್ಮನ್ನು ಪೂರ್ಣ ತೊಡಗಿಸಿಕೊಂಡಿರುವ ಶ್ರೀ ಮಲ್ಲಿಕಾರ್ಜುನ ಖರ್ಗೆ ಅವರು ಇದೀಗ ಎಐಸಿಸಿಯ ಅಧ್ಯಕ್ಷರಾಗಿದ್ದಾರೆ. ಇದು ಇಡೀ ಭಾರತೀಯರು ಅದರಲ್ಲೂ ತಮ್ಮ ಆಳವಾದ ಅನುಭವ ಮತ್ತು ದೂರದೃಷ್ಟಿಯಿಂದ ಕರ್ನಾಟಕಕ್ಕೆ ಮಾರ್ಗದರ್ಶನ ನೀಡುತ್ತಿರುವ ಶ್ರೀ ಮಲ್ಲಿಕಾರ್ಜುನ ಖರ್ಗೆಯವರು ನಮ್ಮ ಹೆಮ್ಮೆ.

ಭಾರತ ಗಣರಾಜ್ಯದ ಮುಖ್ಯ ಭಾಗವಾಗಿರುವ ಕರ್ನಾಟಕವನ್ನು ಮಹಾನ್ ನಾಯಕರುಗಳಾದ ಶ್ರೀಯುತರುಗಳಾದ ಕೆಂಗಲ್ ಹನುಮಂತಯ್ಯ, ಎಸ್.ನಿಜಲಿಂಗಪ್ಪ, ಡಿ.ದೇವರಾಜ ಅರಸ್, ವೀರೇಂದ್ರ ಪಾಟೀಲ್, ಎಸ್.ಬಂಗಾರಪ್ಪ, ಎಂ.ವೀರಪ್ಪ ಮೊಯಿಲಿ, ಎಸ್.ಎಂ.ಕೃಷ್ಣ ಮತ್ತು ಸಿದ್ದರಾಮಯ್ಯ ಅವರು ಮುನ್ನಡೆಸಿದ್ದಾರೆ. ವಿದ್ಯುತ್, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಭೂ ಸುಧಾರಣೆ, ಕೈಗಾರಿಕೀಕರಣ, ಶಿಕ್ಷಣ, ಆರೋಗ್ಯ ಕಾಳಜಿಯಂತಹ ಕ್ಷೇತ್ರಗಳಲ್ಲಿ ರಾಜ್ಯ ಮಾಡಿದಂತಹ ಸಾಧನೆ ಬಹುಶಃ ಇತರ ಯಾವ ರಾಜ್ಯವೂ ಸರಿಸಾಟಿಯಾಗಿ ನಿಲ್ಲಲು ಸಾಧ್ಯವಿಲ್ಲದ ರೀತಿಯಲ್ಲಿ ಇತ್ತು.

ದುರದೃಷ್ಟವಶಾತ್, ಪ್ರಧಾನಿ ಶ್ರೀ ನರೇಂದ್ರ ಮೋದಿ ನೇತೃತ್ವದ ಭಾಜಪ ಸರಕಾರ ಮತಾಂಧತೆ, ಭಯಂಕರ ಸುಳ್ಳು ಘೋಷಣೆಗಳು ಹಾಗೂ ಅನಿಯಂತ್ರಿತ ಭ್ರಷ್ಟಾಚಾರವನ್ನು ಪೋಷಿಸುತ್ತ ಬಂದಿದೆ. ಸರಕಾರದ ವೈಫಲ್ಯವನ್ನು ಮರೆಮಾಚಲು ಬಿಜೆಪಿಯು ಅತ್ಯಂತ ಕೆಟ್ಟ ಮತ್ತು ಅನೈತಿಕ ರೀತಿಯಲ್ಲಿ ಪ್ರಚಾರ ನಡೆಸುತ್ತಲೇ ಬಂದಿದೆ. ಭಾರತದ ಇತಿಹಾಸದಲ್ಲಿ ಸ್ವಾತಂತ್ರ್ಯ ಪೂರ್ವದಲ್ಲಿ ನಾವು ಎಂದಿಗೂ ಇಂತಹ ವಿಪರೀತ ಸನ್ನಿವೇಶವನ್ನು ನೋಡಿದ್ದಿಲ್ಲ.

ಕುಖ್ಯಾತ ಆಪರೇಷನ್ ಕಮಲದ ಹೆಸರಲ್ಲಿ ವಿರೋಧ ಪಕ್ಷಗಳ ಶಾಸಕರನ್ನು ಖರೀದಿಸಿ ಅಧಿಕಾರಕ್ಕೆ ಬಂದ ಭಾಜಪ ನೇತೃತ್ವದ ಸರಕಾರ ಬರೀ ಘೋಷಣೆಗಳನ್ನು ಕೂಗುತ್ತ ಕೆಲಸ ಮಾಡುವುದೇ ಸರಕಾರದ ಕೆಲಸ ಎಂದು ತಿಳಿದುಕೊಂಡಿದೆ. ಪ್ರತಿಯೊಂದು ವಿಷಯಗಳಲ್ಲೂ ಭ್ರಷ್ಟಾಚಾರದಲ್ಲಿ ತೊಡಗಿದೆ ಹಾಗೂ ಪ್ರತಿಯೊಂದು ಅನೈತಿಕ ಕೋಮು ದ್ವೇಷದ ಕೃತ್ಯದ ಹಿಂದೆ ತನ್ನ ವೈಫಲ್ಯಗಳನ್ನು ಅಡಗಿಸಿ ಇಡಲು ಪ್ರಯತ್ನಿಸುತ್ತಿದೆ. ಇತಿಹಾಸವನ್ನು ತಿರುಚುವುದು, ಹಿಂಸೆ ಮತ್ತು ಕ್ರೌರ್ಯವನ್ನು ಉತ್ತೇಜಿಸುವುದು, ದಲಿತರು, ಅಲ್ಪಸಂಖ್ಯಾತರು, ಒಬಿಸಿಗಳು ಮತ್ತು ಇತರ ತುಳಿತಕ್ಕೊಳಗಾದ ಸಮುದಾಯಗಳಿಗೆ ತಾರತಮ್ಯ ಮಾಡುವುದು ಬಿಜೆಪಿಯ ಸಾಮಾನ್ಯ ನಡವಳಿಕೆಯಾಗಿದ್ದು, ಅದು ಸಾರ್ವಜನಿಕ ಸಂವೇದನಾ ಸೂಕ್ಷ್ಮತೆಗಳೆಲ್ಲವನ್ನೂ ಕಳೆದುಕೊಂಡಿದೆ.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯು ಅತ್ಯಂತ ಕ್ರಿಯಾಶೀಲ, ಸದಾ ಉತ್ಸಾಹಿ, ಸಂಘಟನಾ ಚತುರ ಮತ್ತು ದಣಿವರಿಯದ ನಾಯಕ ಶ್ರೀ ಡಿ.ಕೆ.ಶಿವಕುಮಾರ್ ಅವರ ಅಧ್ಯಕ್ಷತೆಯಲ್ಲಿ ಹಾಗೂ ಸದಾ ಜನಪರ ಕಾಳಜಿಯ, ದೂರದೃಷ್ಟಿಯುಳ್ಳ ಮತ್ತು ಅತ್ಯಂತ ದಕ್ಷ, ಸೂಕ್ಷ್ಮ ಸಂವೇದಿ ಆಡಳಿತಗಾರ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಮುನ್ನಡೆಯುತ್ತಿದೆ. ಕೆಪಿಸಿಸಿಗೆ ಮಾರ್ಗದರ್ಶಕರಾಗಿ ಖ್ಯಾತ ಜನಮುಖೀ ನಾಯಕ ಶ್ರೀ ರಣದೀಪ್ ಸಿಂಗ್ ಸುರ್ಜೇವಾಲಾ ಇದ್ದಾರೆ.

ಅಧಿಕಾರದ ಗದ್ದುಗೆ ಏರುವುದೇ ಕಾಂಗ್ರೆಸ್ ಪಕ್ಷದ ಗುರಿಯಲ್ಲ. ಅತ್ಯಂತ ಖಂಡನೆಗೆ ಒಳಗಾಗಿರುವ, ಭ್ರಷ್ಟ ಮತ್ತು ಮತಾಂಧ ಸರಕಾರವನ್ನು ಕಿತ್ತೊಗೆದು, ದಕ್ಷ ಆಡಳಿತ ವ್ಯವಸ್ಥೆಯನ್ನು ಮರುಸ್ಥಾಪಿಸುವ ನಿಟ್ಟಿನಲ್ಲಿ, ಕಾಂಗ್ರೆಸ್ ಪಕ್ಷಕ್ಕೆ ಸಾರ್ವಜನಿಕರ ಜವಾಬ್ದಾರಿ ಇದೆ ಎಂದು ನಾವು ಭಾವಿಸಿದ್ದೇವೆ.

ನಾವು ಇದೀಗ ನಿಮ್ಮ ಮುಂದೆ ಇಡುತ್ತಿರುವ ಈ ಪ್ರಣಾಳಿಕೆ ಭರವಸೆಗಳ ಕೈಪಿಡಿಯಲ್ಲ. ಈ ಮೊದಲೇ ಕಾಂಗ್ರೆಸ್ ಸರಕಾರಗಳು ನಡೆದುಕೊಂಡಂತೆ, ಪ್ರಣಾಳಿಕೆ ಎಂಬುದು ಉತ್ತಮ ಆಡಳಿತದ ನೀಲ ನಕಾಶೆ ಎಂಬುದನ್ನು ಕಾಂಗ್ರೆಸ್

ಸರಕಾರಗಳು ಸಾಧಿಸಿ ತೋರಿಸಿವೆ. ಸಾರ್ವಜನಿಕ ಸೇವೆ ನಮ್ಮ ಧರ್ಮ ಮತ್ತು ಪವಿತ್ರ ಕರ್ತವ್ಯ ಎನ್ನುವುದು ನಮ್ಮ ಸಂಕಲ್ಪ.

ನಾವು ಭರವಸೆಯನ್ನಷ್ಟೇ ನೀಡುವುದಿಲ್ಲ, ಅದನ್ನು ಸಾಧಿಸುತ್ತೇವೆ ಮತ್ತು ಅನುಷ್ಠಾನಕ್ಕೆ ತರುತ್ತೇವೆ.

ಕರ್ನಾಟಕದಲ್ಲಿ ವಿಶ್ವಗುರು ಬಸವಣ್ಣ, ಬ್ರಹ್ಮಶ್ರೀ ನಾರಾಯಣ ಗುರು, ದಾಸಶ್ರೇಷ್ಠರಾದ ಪುರಂದರ ಮತ್ತು ಕನಕ ಮತ್ತು ರಾಷ್ಟ್ರಕವಿ ಕುವೆಂಪು, ಸಂತ ಶಿಶುನಾಳ ಷರೀಫರು ಮತ್ತು ಇತರ ಗೌರವಾನ್ವಿತ ಇತಿಹಾಸಕಾರರು ಮತ್ತು ಸಂಸ್ಕೃತಿ ಪುರುಷರು ಅವರು ಹಾಕಿಕೊಟ್ಟ ಸಾಮಾಜಿಕ ಮೌಲ್ಯಗಳನ್ನು ಕಾಂಗ್ರೆಸ್ ಪಕ್ಷ ಅಳವಡಿಸಿಕೊಂಡಿದೆ.

ಈ ಪ್ರಣಾಳಿಕೆಯನ್ನು ಕಾರ್ಯಗತಗೊಳಿಸಲು ಉನ್ನತ ಮಟ್ಟದ ಪ್ರಣಾಳಿಕಾ ಅನುಷ್ಠಾನ ಸಮಿತಿಯನ್ನು ರಚಿಸಲಾಗುವುದು.

**ಸರ್ವಜನಾಂಗದ ಶಾಂತಿಯ ತೋಟ**

**ಇದುವೇ ಕಾಂಗ್ರೆಸ್‌ನ ಬದ್ಧತೆ.**

**ಇದುವೇ ಈ ಪ್ರಣಾಳಿಕೆಯ ಆಶಯವಾಕ್ಯ**

**ಡಾ. ಜಿ. ಪರಮೇಶ್ವರ**
ಅಧ್ಯಕ್ಷರು

**ಪ್ರೊ. ಕೆ.ಈ. ರಾಧಾಕೃಷ್ಣ**
ಉಪಾಧ್ಯಕ್ಷರು

**ಮಧು ಬಂಗಾರಪ್ಪ**
ಉಪಾಧ್ಯಕ್ಷರು

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಪ್ರಣಾಳಿಕೆ 2023

**ಭರವಸೆ ನೀಡಿದ್ದೇವೆ**

## ಗೃಹಜ್ಯೋತಿ



**200**

ಯೂನಿಟ್ ವಿದ್ಯುತ್ ಉಚಿತ

## ಯುವನಿಧಿ

ನಿರುದ್ಯೋಗ ಭತ್ಯೆ



ರೂ.**3000** ಪದವೀಧರರಿಗೆ

ರೂ**1500** ಡಿಪ್ಲೊಮೊ ಪದವೀಧರರಿಗೆ

## ಅನ್ನಭಾಗ್ಯ



ಪ್ರತಿ ವ್ಯಕ್ತಿಗೆ

**10 ಕೆ.ಜಿ**

ಅಕ್ಕಿ ಉಚಿತ

## ಗೃಹಲಕ್ಷ್ಮಿ



ರೂ.**2000**

ಪ್ರತಿ ಮನೆಯ ಯಜಮಾನಿಗೆ

## ಶಕ್ತಿ

ಎಲ್ಲಾ ಮಹಿಳೆಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣ



## ಆಡಳಿತ ಮತ್ತು ಆಡಳಿತ ನಿರ್ವಹಣೆ

### ಜನಮುಖೀ ಬದ್ಧತೆ

* ಭ್ರಷ್ಟಾಚಾರ ನಿಯಂತ್ರಣ ಕಾಯ್ದೆಗೆ ಕಠಿಣ ನಿಯಮಗಳ ಜಾರಿ, ನಿಯಂತ್ರಣ ಕ್ರಮಗಳ ಪಾರದರ್ಶಕತೆ ಹಾಗೂ ಲೋಕಾಯುಕ್ತದ ಬಲವರ್ಧನೆ

### ಸಾರ್ವಜನಿಕ ಸೇವೆಗಳು

* ಸರಕಾರದಲ್ಲಿ ಖಾಲಿ ಇರುವ ಎಲ್ಲಾ ಅನುಮೋದಿತ ಹುದ್ದೆಗಳನ್ನು ಒಂದು ವರ್ಷದಲ್ಲಿ ಭರ್ತಿ
* 2006ರಿಂದ ನೇಮಕವಾದ, ಪಿಂಚಣಿಗೆ ಅರ್ಹತೆಯುಳ್ಳ ಎಲ್ಲಾ ಸರಕಾರಿ ಮತ್ತು ಅನುದಾನಿತ ಉದ್ಯೋಗಿಗಳನ್ನು ಹಳೆಯ ಪಿಂಚಣಿ ಯೋಜನೆಯ ಅಡಿಯಲ್ಲಿ ತರಲು ಸಹಾನುಭೂತಿಯ ನಿರ್ಧಾರ
* ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳಲ್ಲಿ ಕಳೆದ 15-20 ವರ್ಷಗಳಿಂದ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿರುವ ನೌಕರರನ್ನು ರಾಜಸ್ಥಾನ ಮತ್ತು ಹಿಮಾಚಲ ಪ್ರದೇಶಗಳ ಕಾಂಗ್ರೆಸ್ ಸರಕಾರಗಳ ಆದೇಶಗಳ ಮಾದರಿಯಲ್ಲಿ ಕಾಯಂಗೊಳಿಸುವ ಪ್ರಕ್ರಿಯೆ ಜಾರಿ
* ಅಂಗನವಾಡಿ ಕಾರ್ಯಕರ್ತೆಯರ ವೇತನ ರೂ 11,500/- ರಿಂದ ರೂ. 15,000/- ಹೆಚ್ಚಳ
* ಮಿನಿ ಅಂಗನವಾಡಿ ಕಾರ್ಯಕರ್ತೆಯರ ವೇತನ ರೂ 7,500/- ರಿಂದ ರೂ. 10,000/- ಹೆಚ್ಚಳ ಮತ್ತು ವಿಶ್ರಾಂತಿ ವೇತನ ರೂ. 2 ಲಕ್ಷ
* ಆಶಾ ಕಾರ್ಯಕರ್ತೆಯರಿಗೆ ಮಾಸಿಕ ನಿಶ್ಚಿತ ಗೌರವಧನ ರೂ 5,000/- ದಿಂದ ರೂ 8,000/- ಹೆಚ್ಚಳ
* ಬಿಸಿಯೂಟದ ಅಡಿಗೆಯವರಿಗೆ ಮಾಸಿಕ ಗೌರವಧನ ರೂ 3,600ರಿಂದ ರೂ 6,000ಕ್ಕೆ ಹೆಚ್ಚಳ

### ಕಾಮಗಾರಿಗಳು

* ಲೋಕೋಪಯೋಗಿ, ಗ್ರಾಮೀಣಾಭಿವೃದ್ಧಿ, ನೀರಾವರಿ, ನಗರಾಭಿವೃದ್ಧಿ, ಇಂಧನ ಮುಂತಾದ ಇಲಾಖೆಗಳಲ್ಲಿ ನಡೆಯುವ ಟೆಂಡರ್‌ಗಳಲ್ಲಿ ಸಮರ್ಥವಾದ ಪಾರದರ್ಶಕ ವ್ಯವಸ್ಥೆ ರೂಪಿಸಿ ಭ್ರಷ್ಟಾಚಾರ ನಿಗ್ರಹಿಸಲು ವಿಶೇಷವಾದ ಬಿಗಿಯಾದ ಕಾನೂನಿನ ರಚನೆ
* ಯಾವುದೇ ಕಾಮಗಾರಿ ಪ್ರಾರಂಭಿಸಲು ಅಗತ್ಯ ಅನುಮೋದನೆ ದೊರೆತ ಮೇಲೆ 90 ದಿನಗಳ ಒಳಗೆ ಕಾಮಗಾರಿಗಳ ಪ್ರಾರಂಭ ಮತ್ತು ನಿಗದಿತ ಸಮಯದಲ್ಲಿ ಪೂರ್ಣವಾಗುವಂತೆ ಮತ್ತು ಬಿಲ್ಲುಗಳ ಪಾವತಿಗಳಾಗುವಂತೆ ಪಾರದರ್ಶಕ ವ್ಯವಸ್ಥೆ

### ಪೊಲೀಸ್ ವ್ಯವಸ್ಥೆ

* ಒಟ್ಟು ಪೊಲೀಸ್ ಬಲದಲ್ಲಿ ಶೇ 33ರಷ್ಟು ಮಹಿಳಾ ಪೊಲೀಸ್ ಬಲ ಇರುವಂತೆ ನೇಮಕಾತಿ. ಇಲ್ಲಿ ಕನಿಷ್ಠ ಶೇ 1 ರಷ್ಟು ತೃತೀಯ ಲಿಂಗಿಗಳಿಗೆ ಅವಕಾಶ
* ರಾತ್ರಿ ಪಾಳಿಯ ಸಿಬ್ಬಂದಿಗೆ ರೂ 5 ಸಾವಿರ ವಿಶೇಷ ಮಾಸಿಕ ಭತ್ಯೆ ಮತ್ತು ಎಲ್ಲಾ ಪೊಲೀಸರಿಗೆ ವರ್ಷಕ್ಕೆ ಒಂದು ತಿಂಗಳ ವೇತನ ಹೆಚ್ಚುವರಿ ಪಾವತಿ
* ಸೈಬರ್ ಮತ್ತು ಆರ್ಥಿಕ ಅಪರಾಧಗಳ ತನಿಖಾ ಔನ್ನತ್ಯದ ಸಂಶೋಧನೆಗಾಗಿ ರೂ 2,00 ಕೋಟಿಗಳ ಮೂಲನಿಧಿ

## ಕಾನೂನು ಮತ್ತು ನ್ಯಾಯ

### ನ್ಯಾಯಪೀಠದೆದುರು ಎಲ್ಲರೂ ಸಮಾನರೇ

* ಕನಕಪುರದಲ್ಲಿ ಅತ್ಯಾಧುನಿಕ ವಿಶ್ವದರ್ಜೆಯ ವಿಧಿವಿಜ್ಞಾನ ವಿಶ್ವವಿದ್ಯಾಲಯ ಸ್ಥಾಪನೆ

* ಕರ್ನಾಟಕ ಮಾಹಿತಿದಾರರ ಸಂರಕ್ಷಣಾ ಕಾಯ್ದೆ ಜಾರಿ

* ಕುಟುಂಬದ ರಕ್ತಸಂಬಂಧಿಗಳೊಳಗೆ ಉಡುಗೊರೆ/ದಾನ/ವಿಲ್ ರೂಪದ ಭೂ ವರ್ಗಾವಣೆಗೆ ನೋಂದಣಿ ಶುಲ್ಕದಲ್ಲಿ ಕಡಿತ

* ಧರ್ಮ ಮತ್ತು ಜಾತಿಯ ಹೆಸರಿನಲ್ಲಿ ಸಮಾಜದಲ್ಲಿ ದ್ವೇಷವನ್ನು ಬಿತ್ತಿ ವಿಭಜನೆಗೆ ಕಾರಣವಾಗುವ, ವ್ಯಕ್ತಿಗಳು ಮತ್ತು ಸಂಘಟನೆಗಳ ವಿರುದ್ಧ ಕಠಿಣ ಮತ್ತು ನಿರ್ಣಾಯಕ ಕಾನೂನು ಕ್ರಮವನ್ನು ತೆಗೆದುಕೊಳ್ಳಲು ಕಾಂಗ್ರೆಸ್ ಪಕ್ಷ ಬದ್ಧವಾಗಿದೆ. ಸಂವಿಧಾನವೇ ಪವಿತ್ರ ಎಂದು ನಂಬಿರುವ ನಾವು ಯಾವುದೇ ವ್ಯಕ್ತಿಗಳಾಗಲಿ ಭಜರಂಗದಳ ಮತ್ತು ಪಿ.ಎಫ್.ಐಗಳು ಸೇರಿದಂತೆ ಬಹುಸಂಖ್ಯಾತ ಅಥವಾ ಅಲ್ಪಸಂಖ್ಯಾತ ಇತರರಾಗಲಿ ಸಂವಿಧಾನದ ವಿಧಿಗಳನ್ನು ಉಲ್ಲಂಘಿಸುವುದನ್ನು ಸಹಿಸುವುದಿಲ್ಲ ಆದ ಕಾರಣ ಇಂತಹ ವ್ಯಕ್ತಿಗಳು ಮತ್ತು ಸಂಘಟನೆಗಳ ನಿಷೇಧವೂ ಸೇರಿದಂತೆ  ಬಲವಾದ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

## ಗ್ರಾಮೀಣ ಮೂಲಸೌಲಭ್ಯ

### ನಮ್ಮ ಹಳ್ಳಿ–ನಮ್ಮ ಸೌಲಭ್ಯ

* ಹಳ್ಳಿಗಳಲ್ಲಿ ಸಾರ್ವಜನಿಕ ಸೌಲಭ್ಯ ಸುಧಾರಣೆ, ಎಲ್ಲಾ ಮನೆಗಳಿಗೂ ಶುದ್ಧ ಕುಡಿಯುವ ನೀರು, ಶೌಚಾಲಯ, ಮೂಲ ಶಿಕ್ಷಣ, ಆರೋಗ್ಯ, ಸರ್ವ ಋತು ರಸ್ತೆಗಳಿಗಾಗಿ ಮಹಾತ್ಮ ಗಾಂಧಿ ಗ್ರಾಮ ಸ್ವರಾಜ್ಯ ಯೋಜನೆಗೆ ಐದು ವರ್ಷಗಳಲ್ಲಿ ರೂ 50 ಸಾವಿರ ಕೋಟಿ ಹೂಡಿಕೆ

* ಪ್ರತಿ ಗ್ರಾಮ ಪಂಚಾಯತ್‌ನಲ್ಲಿ ಹೈಸ್ಪೀಡ್ ವೈಫೈ ಹಾಟ್‌ಸ್ಪಾಟ್ ಸ್ಥಾಪನೆ

## ನಗರಾಭಿವೃದ್ಧಿ

* ಬೆಂಗಳೂರಿನ ಟೆಂಡರ್‌ಶ್ಯೂರ್ ರಸ್ತೆ ಮಾದರಿ 10 ಲಕ್ಷಕ್ಕಿಂತ ಅಧಿಕ ಜನಸಂಖ್ಯೆ ಇರುವ ನಗರಗಳಿಗೆ ವಿಸ್ತರಣೆ

* ಬಹುಮಹಡಿ ಸಂಕೀರ್ಣಗಳ ಮಾಲೀಕರಿಗೆ ಆಸ್ತಿ ವರ್ಗಾವಣೆ ಒದಗಿಸುವ ಸಲುವಾಗಿ 1972ರ ಕರ್ನಾಟಕ ಅಪಾರ್ಟ್‌ಮೆಂಟ್ ಮಾಲೀಕತ್ವ ಕಾಯ್ದೆಗೆ ತಿದ್ದುಪಡಿ

* ಸ್ಲಂ ಪ್ರದೇಶಗಳಿಗೆ ಶ್ರಮಿಕ ನಿವಾಸ ಪ್ರದೇಶ ಎನ್ನುವ ನಾಮಕರಣ ಮತ್ತು ವಸತಿಯೋಜನೆ, ವಸತಿ ಮತ್ತು ನಿವೇಶನಗಳ ಹಕ್ಕುಪತ್ರ ವಿತರಣೆ

* ವಸತಿ ಸಮುಚ್ಚಯಗಳ ಸಂಕೀರ್ಣಗಳ ಮನೆ ಮಾಲೀಕರ ಸಂಘಗಳಿಗೆ ರಕ್ಷಣೆ ಮತ್ತು ನಿಯಮಾವಳಿ ರಚಿಸಲು ಕಾನೂನಿನ ಮಾರ್ಪಾಟು

## ಕೃಷಿ ಹಾಗೂ ಬೇಸಾಯ– ರೈತ ಸ್ನೇಹಿ ಕಾರ್ಯಕ್ರಮಗಳು

### ಸಸ್ಯಶ್ಯಾಮಲೆ

* ರಾಯಪುರ ಅಧಿವೇಶನದಲ್ಲಿ ಕನಿಷ್ಠ ಬೆಂಬಲದ ಬಗ್ಗೆ (ಎಂಎಸ್‌ಪಿ) ಕಾಂಗ್ರೆಸ್ ಪಕ್ಷವು ತೆಗೆದುಕೊಂಡ ನಿರ್ಣಯದಂತೆ-ರೈತರ ಹಕ್ಕಾಗಿರುವ ಕನಿಷ್ಠ ಬೆಂಬಲ ಬೆಲೆಯನ್ನು ಅನುಷ್ಠಾನಗೊಳಿಸಲು ಸ್ವಾಮಿನಾಥನ್

ವರದಿಯ ಮತ್ತು ಕರ್ನಾಟಕ ಕೃಷಿ ಉತ್ಪನ್ನ ಬಲೆ ನಿಗದಿ ಆಯೋಗದ ವರದಿಗಳ ಆಧಾರದಂತೆ, ರೈತ ಪ್ರತಿನಿಧಿಗಳ ಒಡನೆ ಚರ್ಚೆ ಮಾಡಿ, ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ಬೆಲೆ ನೀತಿಯನ್ನು ಜಾರಿ ಮಾಡುವುದು

* ಪ್ರತಿ ವಿಭಾಗಕ್ಕೆ ಒಂದರಂತೆ ಕೃಷಿ ಬೆಲೆ ಆಯೋಗ ಸ್ಥಾಪನೆ
* ರೈತರಿಗೆ ಬಡ್ಡಿ ರಹಿತ ಸಾಲ ರೂ 3 ಲಕ್ಷದಿಂದ ರೂ 10 ಲಕ್ಷಕ್ಕೆ ವಿಸ್ತರಣೆ. ಕನಿಷ್ಠ ಶೇ 3ರ ಬಡ್ಡಿದರದಲ್ಲಿ ರೂ 15 ಲಕ್ಷದವರೆಗೆ ಸಾಲ. ಸರಕಾರದಿಂದಲೇ ಬಡ್ಡಿ ವ್ಯತ್ಯಾಸ ಪಾವತಿ
* **ಕೃಷಿ ಉನ್ನತಿ ನಿಧಿ**– ಕೃಷಿ ಉತ್ಪನ್ನ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿ ಸ್ಟಾರ್ಟ್‌ಅಪ್ ಆರಂಭಿಸಲು ಮತ್ತು ಇತರ ಸಂಶೋಧನೆಗಳ ಉತ್ತೇಜನಕ್ಕೆ ಸಾಲ ರೂ 500 ಕೋಟಿಗಳ ಸಾಲ ನಿಧಿ
* ಗ್ರಾಮೀಣ ಮಹಿಳೆಯರು ನಡೆಸುವ ಕೃಷಿ ಆಧರಿತ ಗ್ರಾಮೀಣ ಉದ್ಯಮಗಳ ಉತ್ತೇಜನಕ್ಕೆ ರೂ 200 ಕೋಟಿ ಹೂಡಿಕೆ
* ಭಾಜಪ ಸರಕಾರ ಜಾರಿಗೆ ತಂದಿರುವ ಕೃಷಿ ಕಾಯ್ದೆಗಳು, ಎಪಿಎಂಸಿ ತಿದ್ದುಪಡಿ ಕಾಯ್ದೆಗಳ ರದ್ದು. ರೈತರ ವಿರುದ್ಧ ದಾಖಲಾಗಿರುವ ರಾಜಕೀಯ ಪ್ರೇರಿತ ಎಲ್ಲಾ ಪ್ರಕರಣಗಳನ್ನು ಹಿಂದೆಗೆದುಕೊಳ್ಳಲಾಗುವುದು
* ಸಾವಯವ ಸರದಾರ ಯೋಜನೆ-ಸಾವಯವ ಕೃಷಿ ಉತ್ತೇಜನಕ್ಕೆ ರೂ 2,500 ಕೋಟಿ ಹೂಡಿಕೆ
* ಜಲ ಚೇತನ ಆಂದೋಲನ-ತುಂತುರು ಮತ್ತು ಹನಿ ನೀರಾವರಿ ಅಳವಡಿಕೆಗೆ ಶೇ 100ರಷ್ಟು ಸಬ್ಸಿಡಿ
* ಗ್ರಾಮೀಣ ಕೃಷಿಕ ಮಹಿಳೆಯರಿಗಾಗಿ ಸ್ವ ಸಹಾಯ ಗುಂಪುಗಳಿಗೆ ಹಾಗೂ ರೂ 3 ಲಕ್ಷದವರೆಗೆ ಬಡ್ಡಿರಹಿತ ಸಾಲ
* ಬರಗಾಲ ಮತ್ತು ಕ್ಷಾಮದ ಅವಧಿಯಲ್ಲಿ ಕೃಷಿ ಉತ್ಪನ್ನಗಳಿಗೆ ಆಗುವ ನಷ್ಟಕ್ಕೆ ಸೂಕ್ತ ಪರಿಹಾರ ನೀಡುವ ನಿಟ್ಟಿನಲ್ಲಿ ಸಾಲ ಮರುಪಾವತಿ ಮುಂದೂಡುವಿಕೆ
* ಶರಾವತಿ ಹಿನ್ನೀರು ಪುನರ್ವಸತಿ ಸಮಸ್ಯೆಗೆ ಆದ್ಯತೆಯಲ್ಲಿ ಪರಿಹಾರ
* ವಸತಿ ಸಮಸ್ಯೆಗೆ ತೊಡಗಕಾಗಿರುವ ಅರಣ್ಯ ಕಾಯ್ದೆಯ ವಿಧಿಗಳ ತಿದ್ದುಪಡಿ
* ರೈತರು ಮತ್ತು ವನ್ಯ ಕಾಡುಪ್ರಾಣಿಗಳ ಸಂಘರ್ಷವನ್ನು ತಪ್ಪಿಸಲು ವೈಜ್ಞಾನಿಕ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ರೂ 200 ಕೋಟಿಗಳ ಹೂಡಿಕೆ

## ತೋಟಗಾರಿಕೆ

* ದ್ರಾಕ್ಷಿ ಬೆಳೆಗಾರರಿಗೆ ಸಬ್ಸಿಡಿ ಒದಗಿಸಲು ರೂ 500 ಕೋಟಿ
* ಕಾಫಿ ಕರ್ನಾಟಕ ಬ್ರ್ಯಾಂಡ್ ಸೃಷ್ಟಿ

## ರೇಷ್ಮೆ

* ರೇಷ್ಮೆ ಸ್ಥಿರತೆ ನಿಧಿಗೆ ಆರಂಭಿಕ ಹಂತದಲ್ಲಿ ರೂ 2000 ಕೋಟಿ ಅನುದಾನ
* ಎಲ್ಲಾ ರೇಷ್ಮೆ ನೂಲು ರೀಲರ್‌ಗಳಿಗೆ ರೂ 3 ಲಕ್ಷ ಬಡ್ಡಿರಹಿತ ಸಾಲ

## ಪುಣ್ಯಕೋಟಿ–ನಂದಿನಿ ನಮ್ಮದು–ನಂದಿನಿ ನಮ್ಮದೇ

### ಹೈನು ಅಭಿವೃದ್ಧಿ, ಪಶುಸಂಗೋಪನೆ

* ಮಿಷನ್ ಕ್ಷೀರ ಕ್ರಾಂತಿ- ಪ್ರತಿ ದಿನ 1.5 ಕೋಟಿ ಲೀಟರ್ ಹಾಲು ಉತ್ಪಾದನೆ ಗುರಿ ಸಾಧನೆಗಾಗಿ ಯೋಜನೆ
* ಪಶು ಭಾಗ್ಯ- ಉತ್ತಮ ತಳಿಯ ಹಸು/ಎಮ್ಮೆಗಳ ಖರೀದಿಗೆ ಶೂನ್ಯ ಬಡ್ಡಿದರದಲ್ಲಿ ರೂ 3 ಲಕ್ಷದವರೆಗೆ ಸಾಲ

* ಕುರಿಗಾಹಿ ಸಂವರ್ಧನಾ ನಿಧಿ- ಕುರಿ ಸಾಕಾಣಿಕೆಗಾಗಿ ರೂ 1 ಸಾವಿರ ಕೋಟಿಯ ನಿಧಿ ಸ್ಥಾಪನೆ
* ಕ್ಷೀರಧಾರೆ- ಪ್ರತಿ ಲೀಟರ್ ಹಾಲಿನ ಸಬ್ಸಿಡಿಯನ್ನು ರೂ 5ರಿಂದ ರೂ 7ಕ್ಕೆ ಹೆಚ್ಚಳ
* ಕ್ಷೀರ ಕ್ರಾಂತಿ ಕ್ರೆಡಿಟ್ ಕಾರ್ಡ್- ರೂ 50 ಸಾವಿರ ಕ್ರೆಡಿಟ್ ಮಿತಿಯೊಂದಿಗೆ ಎಲ್ಲಾ ಕೃಷಿಕರಿಗೆ ಕ್ರೆಡಿಟ್ ಕಾರ್ಡ್
* ಋಣಮುಕ್ತ ಕುರಿಗಾಹಿ ಯೋಜನೆ- ಎಲ್ಲಾ ಕುರಿ, ಮೇಕೆ ಸಾಕಾಣಿಕೆದಾರರ ರೂ 1 ಲಕ್ಷದವರೆಗಿನ ಸಾಲ ಮನ್ನಾ
* ಜಾನುವಾರು ಸಾಕಣೆದಾರರಿಂದ ಪ್ರತಿ ಕೆ.ಜಿ.ಗೆ 3 ರೂಪಾಯಿಯಂತೆ ಸೆಗಣಿ (ಗೊಬ್ಬರ) ಖರೀದಿ, ಗ್ರಾಮೀಣ ಮಹಿಳೆ/ಯುವಕರನ್ನು ತೊಡಗಿಸಿಕೊಂಡು ಪ್ರತಿ ಪಂಚಾಯತ್‌ನಲ್ಲಿ ಗೊಬ್ಬರ ತಯಾರಿಕಾ ಕೇಂದ್ರಗಳ ಸ್ಥಾಪನೆ
* ಮಹಿಳೆಯರಿಗೆ ಯಾವುದೇ ಭದ್ರತೆ ಪಡೆಯದೆ ಗರಿಷ್ಠ ಎರಡು ಹಸು ಅಥವಾ ಎಮ್ಮೆಗಳನ್ನು ಖದೀದಿಸಲು ಬಡ್ಡಿರಹಿತ ಸಾಲ

## ಮೀನುಗಾರಿಕೆ–ಬ್ಲೂ ಎಕಾನಮಿ

* ಮತ್ಸ್ಯಕ್ರಾಂತಿ- ಮೀನುಗಾರಿಕೆಯಿಂದ ರೂ 12 ಸಾವಿರ ಕೋಟಿಯ ಬ್ಲೂ ಎಕಾನಮಿ ಗುರಿ ಸಾಧಿಸಲು ಕಾರ್ಯಕ್ರಮ
* ಮತ್ಸ್ಯ ಸರ್ವೋದಯ ನಿಧಿ- ಮೀನುಗಾರಿಕಾ ಕ್ಷೇತ್ರವನ್ನು ಒಟ್ಟಾರೆಯಾಗಿ ಸುಧಾರಿಸಲು ರೂ 5 ಸಾವಿರ ಕೋಟಿ
* ಮೀನುಗಾರಿಕಾ ಮಹಿಳೆಯರಿಗೆ ರೂ 3 ಲಕ್ಷದವರೆಗೆ ಬಡ್ಡಿರಹಿತ ಸಾಲ
* ಮತ್ಸ್ಯ ಭಾಗ್ಯ- ಆಳ ಸಮುದ್ರ ಮೀನುಗಾರಿಕೆಗೆ ಪ್ರತಿ ವರ್ಷ 500 ಲೀಟರ್‌ವರೆಗೆ ತೆರಿಗೆ ಮುಕ್ತ ಡೀಸೆಲ್
* ಮತ್ಸ್ಯ ಆಶಾಕಿರಣ ಯೋಜನೆ- ಮೀನುಗಾರಿಕಾ ಸ್ಥಗಿತ ಸಮಯದಲ್ಲಿ ಎಲ್ಲಾ ಮೀನುಗಾರರಿಗೆ ತಿಂಗಳಿಗೆ ರೂ 6 ಸಾವಿರ ಒದಗಿಸಲು ಕ್ರಮ
* ನಾಡದೋಣಿ ಮೀನುಗಾರರಿಗೆ ರೂ 10 ಸಾವಿರ ಹಣಕಾಸು ನೆರವು
* ಮೀನುಗಾರಿಕಾ ದೋಣಿಗಳು ತಂಗುವ ಜೆಟ್ಟಿಗಳು/ ಬಂದರುಗಳಲ್ಲಿ ಹೂಳು ತೆಗೆಯುವುದು ಮತ್ತು ಮಲ್ಪೆ, ಹೊನ್ನಾವರ, ಭಟ್ಕಳ, ಕುಂದಾಪುರ ಮತ್ತು ಬೆಲೆಕೇರಿ ಬಂದರುಗಳಲ್ಲಿ ಎರಡು ವರ್ಷಗಳಿಗೊಮ್ಮೆ ಹೂಳೆತ್ತುವುದು
* ಮತ್ಸ್ಯ ಆಶ್ರಯ ಯೋಜನೆ- ಆರ್ಥಿಕವಾಗಿ ಸಂಕಷ್ಟದಲ್ಲಿರುವ ಎಲ್ಲಾ ಮೀನುಗಾರರಿಗೆ ವಸತಿ ಸೌಲಭ್ಯ

## ನೀರಾವರಿ

* ಮುಂದಿನ 5 ವರ್ಷಗಳಲ್ಲಿ ನೀರಾವರಿಗಾಗಿ ರೂ 1.50 ಲಕ್ಷ ಕೋಟಿ ವಿನಿಯೋಗ
* ಈ ಕೆಳಕಂಡ ನೀರಾವರಿ ಯೋಜನೆಗಳನ್ನು 5 ವರ್ಷಗಳಲ್ಲಿ ಪೂರ್ಣಗೊಳಿಸುವುದು:

ಎ) ಹೊಸ ಯೋಜನೆಗಳು-ಮೇಕೆದಾಟು ಯೋಜನಾ ವೆಚ್ಚ ರೂ 9,000 ಕೋಟಿ, ಮಹದಾಯಿ ರೂ 3,000 ಕೋಟಿ

ಬಿ) ಬೆಳಗಾವಿ, ಹುಬ್ಬಳ್ಳಿ ಧಾರವಾಡ ಜಿಲ್ಲೆಗಳ 50 ಲಕ್ಷ ಜನರಿಗೆ ಕುಡಿಯುವ ನೀರಿನ ಪೂರೈಕೆಗೆ ಮಹಾದಾಯಿ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಬಿಜೆಪಿ ವಿಫಲವಾಗಿದೆ. ಕಾಂಗ್ರೆಸ್ ಪಕ್ಷವು ಮಹಾದಾಯಿ ಯೋಜನೆಯನ್ನು ಸಂಪೂರ್ಣಗೊಳಿಸುವಲ್ಲಿ ಪ್ರಥಮ ಸಚಿವ ಸಂಪುಟ ಸಭೆಯಲ್ಲಿ ರೂ. 500 ಕೋಟಿಗಳನ್ನು ವಿನಿಯೋಗಿಸಿ ಯೋಜನಾ ವೆಚ್ಚವಾದ ರೂ. 3 ಸಾವಿರ ಕೋಟಿಗಳನ್ನ 5 ವರ್ಷದಲ್ಲಿ ವಿನಿಯೋಗಿಸುವುದು.

ಸಿ) ಕುಡಿಯುವ ನೀರು, ಕೃಷಿ ಮತ್ತು ವಿದ್ಯುತ್ ಉತ್ಪಾದನೆಗಾಗಿ ಈ ಯೋಜನೆಗಳನ್ನು ಬಳಸಿಕೊಳ್ಳಲಾಗುವುದು.

ಡಿ) ಹಳೆಯ ಯೋಜನೆಗಳು- ಕೃಷ್ಣಾ ಮೇಲ್ದಂಡೆ, ಆಲಮಟ್ಟಿ ಅಣೆಕಟ್ಟೆ ಎತ್ತರ, ಭದ್ರಾ ಮೇಲ್ದಂಡೆ ಯೋಜನೆ, ಎತ್ತಿನಹೊಳೆ ಹಾಗೂ ವಾರಾಹಿ ಯೋಜನೆಗಳು ಮತ್ತು ಎಲ್ಲಾ ಉಪಕಾಲುವೆಗಳ ಯೋಜನೆಗಳು

ಇ) ಆಧುನಿಕ ತಂತ್ರಜ್ಞಾನವನ್ನು ಬಳಸಿ ಕಳಸಾ-ಬಂಡೂರಿ ಯೋಜನೆಯನ್ನು ಪೂರೈಸಲಾಗುವುದು.

ಎಫ್) ಕೇಂದ್ರ ಸರ್ಕಾರದಿಂದ ಈ ಯೋಜನೆಗಳಿಗೆ ಅನುಮತಿಗಳನ್ನು ತರಲು ತ್ವರಿತ ಪ್ರಯತ್ನ ನಡೆಸಲಾಗುವುದು.

ಡಿ) ಎತ್ತಿನಹೊಳೆ ಯೋಜನೆಯನ್ನು ಎರಡು ವರ್ಷದೊಳಗಡೆ ಸಂಪೂರ್ಣಗೊಳಿಸುವುದು

## ಕೈಗಾರಿಕೆ ಮತ್ತು ವಾಣಿಜ್ಯ

* ಮಂಗಳೂರಿನಲ್ಲಿ ಪ್ರವಾಸೋದ್ಯಮ ಮತ್ತು ವ್ಯಾಪಾರವನ್ನು ಉತ್ತೇಜಿಸುವ ಸಲುವಾಗಿ ಅತ್ಯಂತ ಭದ್ರತೆಯ ವಲಯದಲ್ಲಿ ಅಂತರರಾಷ್ಟ್ರೀಯ ಗುಣಮಟ್ಟದ ಚಿನ್ನ ಮತ್ತು ವಜ್ರದ ಪಾರ್ಕ್ ಸ್ಥಾಪನೆ
* ರಾಜ್ಯದ ಗಡಿಭಾಗಗಳಾದ ತಲಪಾಡಿ (ಕೇರಳ), ನಿಪ್ಪಾಣಿ (ಮಹಾರಾಷ್ಟ್ರ), ಬೀದರ್ (ಮಹಾರಾಷ್ಟ್ರ/ತೆಲಂಗಾಣ) ಸರ್ಜಾಪುರ (ತಮಿಳುನಾಡು), ಶ್ರೀನಿವಾಸಪುರಗಳಲ್ಲಿ (ಆಂಧ್ರ) ಕೈಗಾರಿಕೆಗಳ ಉತ್ತೇಜನಕ್ಕಾಗಿ ಗಡಿ ಕೈಗಾರಿಕಾ ಅಭಿವೃದ್ಧಿ ನಿಗಮ ಸ್ಥಾಪನೆ. ಇದಕ್ಕಾಗಿ ಐದು ವರ್ಷಗಳಲ್ಲಿ ರೂ 5,000 ಕೋಟಿ ನಿಗದಿ
* ಸ್ಟಾರ್ಟ್‌ಅಪ್ ನಿಧಿ- ಪ್ರತಿ ವಿಧಾನಸಭಾ ಕ್ಷೇತ್ರಕ್ಕೆ ರೂ 10 ಕೋಟಿ ನೀಡಿಕೆ
* ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಮೈಸೂರು, ಮಂಗಳೂರು, ಹುಬ್ಬಳ್ಳಿ-ಧಾರವಾಡಗಳಲ್ಲಿ ಆಧುನಿಕ ಟೆಕ್ ಪಾರ್ಕ್ ಮೇಲ್ದರ್ಜೆಗೆ. ಇಲ್ಲಿ 10 ಲಕ್ಷ ಐಟಿ ಉದ್ಯೋಗಿಗಳಿಗೆ ಅವಕಾಶ
* ಬ್ರಹ್ಮಾವರದ ವಾಣಿ ವಿಲಾಸ ಸಹಕಾರಿ ಸಕ್ಕರೆ ಕಾರ್ಖಾನೆಯ ಪುನರಾರಂಭಕ್ಕೆ ಉತ್ತೇಜನ
* ನಗರಗಳಲ್ಲಿ ಮಾಲಿನ್ಯ ರಹಿತ ಪರಿಸರ ಸ್ನೇಹಿ ಸಂಚಾರ ವ್ಯವಸ್ಥೆಗಾಗಿ 2 ಚಕ್ರ ಮತ್ತು 3 ಚಕ್ರದ ಎಲೆಕ್ಟ್ರಿಕ್ ವಾಹನಗಳ ಖರೀದಿಗೆ ರಾಜ್ಯ ಜಿಎಸ್‌ಟಿ ಯಲ್ಲಿ ರಿಯಾಯಿತಿ
* ಬಳ್ಳಾರಿ ಅಂತಾರಾಷ್ಟ್ರೀಯ ಗುಣಮಟ್ಟದ ಜೀನ್ ಬಟ್ಟೆಗಳ ರಾಷ್ಟ್ರೀಯ ಕೇಂದ್ರವಾಗುವಂತೆ ರೂ.5000 ಕೋಟಿಯ ಹೂಡಿಕೆಯೊಂದಿಗೆ ಅಪರಲ್ ಪಾರ್ಕ್ ನಿರ್ಮಿಸಿ ಉದ್ಯೋಗವನ್ನು ಹೆಚ್ಚಿಸಲು ಕ್ರಮ.
* ಐಟಿ ಕ್ಷೇತ್ರ ವಿಸ್ತರಣೆ- ರಾಜ್ಯದ ಜಿಡಿಪಿಯಲ್ಲಿ ಶೇ 25ರಷ್ಟು ಕೊಡುಗೆ ಹಾಗೂ ದೇಶದ ಐಟಿ ಕ್ಷೇತ್ರದಲ್ಲಿ ರಾಜ್ಯದ ಪಾಲು ಕನಿಷ್ಠ ಶೇ 33ರಷ್ಟು ಇರುವಂತೆ ನೋಡಿಕೊಳ್ಳಲು ಐಟಿ ಕ್ಷೇತ್ರ ವಿಸ್ತರಣೆಗೆ ಕ್ರಮ

## ಅತಿಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು (ಎಂಎಸ್‌ಎಂಇ)

* ಸ್ಥಳೀಯ ಆರ್ಥಿಕತೆಯ ಉತ್ತೇಜನಕ್ಕಾಗಿ ಸಣ್ಣ ವ್ಯಾಪಾರಿಗಳಿಗೆ ಹಾಗೂ ಅಂಗಡಿಗಳಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡಲು ರೂ 1 ಸಾವಿರ ಕೋಟಿಯ ಕಲ್ಯಾಣ ನಿಧಿ ಸ್ಥಾಪನೆ
* ಹೆಚ್ಚಿನ ಎಂಎಸ್‌ಎಂಇಗಳು ಅದರಲ್ಲೂ ಮುಖ್ಯವಾಗಿ ಕಿರು ಉದ್ಯಮಗಳು ಸಾಲ ಪಡೆಯುವುದನ್ನು ಖಾತರಿಪಡಿಸಲು ರಾಜ್ಯ ಮಟ್ಟದ ಕ್ರೆಡಿಟ್ ಗ್ಯಾರಂಟಿ ಯೋಜನೆ ಜಾರಿ

## ಪ್ರವಾಸೋದ್ಯಮ

### ಬನ್ನಿ, ನೋಡಬನ್ನಿ

* ರಾಜ್ಯದಲ್ಲಿ ಸಮಗ್ರ ತಂತ್ರಜ್ಞಾನ ಆಧಾರಿತ ಪ್ರವಾಸೋದ್ಯಮ ಅಭಿವೃದ್ಧಿಗಾಗಿ ರೂ 5 ಸಾವಿರ ಕೋಟಿ ನಿಧಿ ಸ್ಥಾಪನೆ

* ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ ಯುವಕರಿಗೆ 50 ಟ್ಯಾಕ್ಸಿಗಳಿಗೆ ಪರವಾನಗಿ ಮತ್ತು ಶೇ 5 ಬಡ್ಡಿದರದಲ್ಲಿ ಸಹಾಯಧನ
* ಹೋಮ್‌ಸ್ಟೇ ಮಾಲೀಕರಿಗೆ ಶೇ 5ರ ಬಡ್ಡಿದರದಲ್ಲಿ ರೂ 10 ಲಕ್ಷದವರೆಗೆ ಸಾಲ ಮತ್ತು ಸಂಬಂಧಿತ ಕಾನೂನು ನಿಯಮಾವಳಿಗಳ ಮರುಪರಿಶೀಲನೆ

## ಹೋಟೆಲ್ ಮತ್ತು ಆತಿಥ್ಯ ಉದ್ಯಮ

* 20ಕ್ಕಿಂತ ಅಧಿಕ ನೌಕರರು ಇರುವ ಹೋಟೆಲ್‌ಗಳಿಗೆ ಉದ್ಯಮದ ಸ್ಥಾನಮಾನ
* ಸ್ವಯಂ ಉದ್ಯೋಗದಲ್ಲಿ ತೊಡಗುವ ಸಣ್ಣ ಹೋಟೆಲ್ / ಬೇಕರಿ / ಸ್ಟ್ರೀಟ್ ಸ್ಟಾಲ್‌ಗಳಿಗೆ ಶೇಕಡ 6% ಬಡ್ಡಿದರದಲ್ಲಿ ರೂಪಾಯಿ ಹತ್ತು ಲಕ್ಷದವರೆಗೆ ಸಾಲ

## ವಿದ್ಯುತ್ ಮತ್ತು ಇಂಧನ

* ಪ್ರತಿ ಮನೆಗೂ 200 ಯೂನಿಟ್ ಉಚಿತ ವಿದ್ಯುತ್ - "ಗೃಹ ಜ್ಯೋತಿ" ಯೋಜನೆ
* ಮನೆಗಳಲ್ಲಿ ಬಳಸುವ ಸೌರಶಕ್ತಿಯ ಪರಿಕರಗಳಿಗೆ ರೂ 3 ಲಕ್ಷಗಳವರೆಗೆ ಶೇ 25 ರಷ್ಟು ಸಬ್ಸಿಡಿ
* 5000 ಸಾವಿರ ಮೆಗಾವ್ಯಾಟ್ ಹೆಚ್ಚಿಗೆ ವಿದ್ಯುಚ್ಛಕ್ತಿ ಉತ್ಪಾದಿಸಲು ಬೃಹತ್ ಸೋಲಾರ್ ಪಾರ್ಕ್‌ಗಳ ನಿರ್ಮಾಣಕ್ಕೆ ಉತ್ತೇಜನ
* ಎಸ್‌ಜಿಎಸ್‌ಟಿಯಲ್ಲಿ ಶೇ 50 ರಿಯಾಯಿತಿ ಮತ್ತು ಸಬ್ಸಿಡಿಗಳನ್ನು ಕೊಡುವುದರ ಮೂಲಕ ಇವಿ ಚಾರ್ಜಿಂಗ್ ಮೂಲಸೌಲಭ್ಯ ಮತ್ತು ಬ್ಯಾಟರಿ ತಯಾರಿಕಾ ಘಟಕಗಳ ಸ್ಥಾಪನೆ

## ಸಾರಿಗೆ

* ಶಕ್ತಿ - ರಾಜ್ಯದಲ್ಲಿ ಎಲ್ಲಾ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ
* ಸಾರ್ವಜನಿಕ ಸಾರಿಗೆ ಪಾಲನ್ನು ಶೇ 55ರಿಂದ ಶೇ 70ಕ್ಕೆ ಹೆಚ್ಚಿಸುವುದು
* ಬಿಎಂಟಿಸಿ ಬಸ್‌ಗಳ ಸಂಖ್ಯೆ 10 ಸಾವಿರಕ್ಕೆ ಹೆಚ್ಚಳ
* ಕೆಎಸ್‌ಆರ್‌ಟಿಸಿ ಬಸ್‌ಗಳ ಸಂಖ್ಯೆಯನ್ನು 15,000ಕ್ಕೆ ಹೆಚ್ಚಳ
* ಎರಡು ವರ್ಷಗಳಲ್ಲಿ ಒಟ್ಟು ಬಸ್‌ಗಳ ಸಂಖ್ಯೆಯಲ್ಲಿ ಶೇ 50ರಷ್ಟು ಬಸ್‌ಗಳು ವಿದ್ಯುತ್ ಚಾಲಿತ ಬಸ್‌ಗಳೇ ಇರುವಂತೆ ಯೋಜನೆ
* ಸಾರ್ವಜನಿಕರ ಪಾಲ್ಗೊಳ್ಳುವಿಕೆಯಲ್ಲಿ ಗ್ರಾಮೀಣ ಮಿನಿಬಸ್ ಕಾರ್ಯಕ್ರಮ ಆರಂಭ

## ಗಣಿಗಾರಿಕೆ, ಅರಣ್ಯ ಮತ್ತು ಪರಿಸರ ಸಂರಕ್ಷಣೆ

* ಗಣಿಗಾರಿಕೆ ಮಾಫಿಯಾಕ್ಕೆ ತಡೆ ಹಾಗೂ ನೈಸರ್ಗಿಕ ಸಂಪನ್ಮೂಲಗಳ ಲೂಟಿ ಅಂತ್ಯಕ್ಕೆ ಕ್ರಮ. ಗಣಿಗಾರಿಕಾ ಕಾನೂನನ್ನು ಇನ್ನೂ ಬಿಗಿಗೊಳಿಸುವುದು
* ಗಣಿಗಾರಿಕೆ, ಕಲ್ಲು ಗಣಿಗಾರಿಕೆ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ಹೊರತೆಗೆಯುವ ವಿಷಯದಲ್ಲಿ ಕಟ್ಟುನಿಟ್ಟಿನ ನಿಯಮಗಳನ್ನು ಜಾರಿಗೆ ತರಲಾಗುವುದು

## ಆಹಾರ, ನಾಗರಿಕ ಪೂರೈಕೆ ಮತ್ತು ಗ್ರಾಹಕ ವ್ಯವಹಾರ

* ಪ್ರತಿ ವ್ಯಕ್ತಿಗೆ ತಿಂಗಳಿಗೆ 10 ಕೆ.ಜಿ. ಅಕ್ಕಿ ಉಚಿತ - "ಅನ್ನಭಾಗ್ಯ"

## ಶಿಕ್ಷಣ

### ಹೃದಯ ತೆರೆಸಬೇಕು ಅಕ್ಷರ

* ಸರಕಾರಿ ಮತ್ತು ಅನುದಾನಿತ ಶಾಲೆ/ಕಾಲೇಜುಗಳಲ್ಲಿನ ಖಾಲಿ ಇರುವ ಎಲ್ಲಾ ಶಿಕ್ಷಕರ ಮತ್ತು ಬೋಧಕೇತರರ ಹುದ್ದೆಗಳಿಗೆ ಒಂದು ವರ್ಷದೊಳಗೆ ನೇಮಕಾತಿ
* ಅವೈಜ್ಞಾನಿಕವಾದ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರದ್ದುಮಾಡಿ ಕರ್ನಾಟಕ ಶಿಕ್ಷಣ ನೀತಿಯ ಅನುಷ್ಠಾನ
* ಭಾಜಪ ಸರಕಾರ ಪಠ್ಯಪುಸ್ತಕಗಳ ವಿಷಯಗಳನ್ನು ವಿಕೃತಗೊಳಿಸಿತ್ತು. ಅದನ್ನು ಸರಿಪಡಿಸಿ ಕುವೆಂಪು, ಬಸವಣ್ಣ, ಆದಿಕವಿ ಪಂಪ ಮತ್ತು ಸಾಂವಿಧಾನಿಕ ನಿರ್ದೇಶನವಾದ ವೈಜ್ಞಾನಿಕ ಮನೋಭಾವವನ್ನು ಮರಳಿ ಪಠ್ಯಪುಸ್ತಕಗಳಲ್ಲಿ ಸೇರಿಸಲು ಕ್ರಮ
* ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಂಘಟನೆಗಳ ನಿರ್ವಹಣೆಯಲ್ಲಿರುವ, 2012ಕ್ಕಿಂತ ಮೊದಲು ಆರಂಭಿಸಿದ ಪಿಯು ತನಕದ ಶಿಕ್ಷಣ ಸಂಸ್ಥೆಗಳನ್ನು ಅನುದಾನ ವ್ಯಾಪ್ತಿಗೆ ತರುವುದು
* ರಾಜ್ಯದ ಎಲ್ಲಾ ಬಗೆಯ ಸ್ಕಾಲರ್‌ಶಿಪ್‌ಗಳನ್ನು ಒಂದೇ ವ್ಯವಸ್ಥೆಯಡಿಯಲ್ಲಿ ತಂದು ಎಲ್ಲಾ ವಿದ್ಯಾರ್ಥಿಗಳಿಗೂ ಕಾಲಮಿತಿಯೊಳಗೆ ವಿದ್ಯಾರ್ಥಿವೇತನ ವಿತರಿಸಲು ರೂ 2,000 ಮೂಲನಿಧಿಯೊಂದಿಗೆ ಕರ್ನಾಟಕ ರಾಜ್ಯ ಶೈಕ್ಷಣಿಕ ಹಣಕಾಸು ನಿಗಮ ಸ್ಥಾಪನೆ
* ಆರ್‌ಟಿಇ ಅಡಿಯಲ್ಲಿ ಶಾಲೆಗಳ ಪ್ರವೇಶಾತಿಗೆ ಇರುವ ಆದಾಯ ಮಿತಿಯನ್ನು ರೂ ರೂ 5 ಲಕ್ಷಕ್ಕೆ ಹೆಚ್ಚಳ
* ಅನುದಾನರಹಿತ ಉರ್ದು, ತಮಿಳು ಮತ್ತು ಇತರ ಭಾಷಾ ಶಾಲೆಗಳ ಸಹಿತ ಎಲ್ಲಾ ಶಾಲೆಗಳಲ್ಲಿ ಕನ್ನಡ ಶಿಕ್ಷಕರ ನೇಮಕ
* ವರ್ಷಕ್ಕೆ 2,500 ಸರಕಾರೀ ಶಾಲೆಗಳನ್ನು ಸ್ಮಾರ್ಟ್ ಶಾಲೆಗಳಾಗಿ ಉನ್ನತೀಕರಣ
* 6ನೇ ತರಗತಿಯಿಂದ 12ನೇ ತರಗತಿವರೆಗೆ ಸರಕಾರಿ ಶಾಲೆಗಳಲ್ಲಿ ಓದಿ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ ಎಂಬಿಬಿಎಸ್/ ಐಐಟಿ/ ಐಐಎಂ/ ಎಂಜಿನಿಯರಿಂಗ್ ಪ್ರವೇಶ ಪಡೆಯುವ ಪ್ರತಿಭಾನ್ವಿತ ವಿದ್ಯಾರ್ಥಿಗಳಲ್ಲಿ ಶೇ 10ರಷ್ಟು ಮಂದಿಗೆ ಪ್ರತಿಭೆಯ ಆಧಾರದ ಮೇಲೆ ಶುಲ್ಕ ಪಾವತಿ

## ಆರೋಗ್ಯ ಸೇವೆಗಳು

* ಎಲ್ಲಾ ಸರಕಾರಿ ಆಸ್ಪತ್ರೆಗಳಲ್ಲಿ ವೈದ್ಯರು ಮತ್ತು ಸಿಬ್ಬಂದಿಯ ಖಾಲಿ ಹುದ್ದೆಗಳ ಭರ್ತಿ
* ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯಡಿಯಲ್ಲಿ ಹಮಾಲಿಗಳು, ಮೀನುಗಾರರು, ನೇಕಾರ ಸಮುದಾಯ, ಕಟ್ಟಡ ಕಾರ್ಮಿಕರು, ಮನೆಗೆಲಸದವರು ಹಾಗೂ ಇತರ ಅಸಂಘಟಿತ ಕ್ಷೇತ್ರಗಳಿಗೆ ವಿಸ್ತರಣೆ
* ಪ್ರತಿ ಜಿಲ್ಲೆಯಲ್ಲಿ ಮತ್ತು ನಗರಗಳಲ್ಲಿ ಖಾಸಗಿ/ಸ್ವಯಂಸೇವಾ ಸಂಸ್ಥೆಗಳ ಸಹಭಾಗಿತ್ವದಲ್ಲಿ ಸುಸಜ್ಜಿತ ವೃದ್ಧಾಶ್ರಮಗಳ ಸ್ಥಾಪನೆ
* ಪ್ರತಿ ಕಂದಾಯ ವಿಭಾಗದಲ್ಲಿ ತಲಾ ಒಂದು ಜಯದೇವ ರೀತಿಯ ಹೃದ್ರೋಗ ಆಸ್ಪತ್ರೆ, ಕಿದ್ವಾಯಿ ಮಾದರಿಯ ಕ್ಯಾನ್ಸರ್ ಆಸ್ಪತ್ರೆ ಹಾಗೂ ನಿಮ್ಹಾನ್ಸ್ ಮಾದರಿಯ ಮನೋರೋಗ ಮತ್ತು ಮಿದುಳು ಚಿಕಿತ್ಸಾ ಆಸ್ಪತ್ರೆ ಸ್ಥಾಪನೆ,
* ಪ್ರತಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನೂ ಮೇಲ್ದರ್ಜೆಗೇರಿಸಿ ಹೆರಿಗೆ ವಾರ್ಡ್, ಮಿನಿ ಶಸ್ತ್ರಚಿಕಿತ್ಸಾ ಕೊಠಡಿ ಸಹಿತ 20 ಹಾಸಿಗೆಗಳು ಇರುವಂತೆ ನೋಡಿಕೊಳ್ಳುವುದು. ಪ್ರತಿ ತಾಲೂಕು ಆಸ್ಪತ್ರೆಯ ಹಾಸಿಗೆಗಳ ಸಂಖ್ಯೆಯನ್ನು 200ಕ್ಕೆ ಹೆಚ್ಚಿಸುವುದು. ಎಲ್ಲಾ ತಾಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಡಯಾಲಿಸಿಸ್ ಕೇಂದ್ರಗಳ ಸ್ಥಾಪನೆ ಮತ್ತು ಮೂತ್ರಪಿಂಡ ರೋಗಿಗಳಿಗೆ ಉಚಿತ ಡಯಾಲಿಸಿಸ್

* ಪ್ರತಿ 100 ಕಿ.ಮೀ.ಗೆ ಒಂದರಂತೆ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸರ್ವಸಜ್ಜಿತ ಟ್ರೂಮಾ ಕೇಂದ್ರ ಸ್ಥಾಪನೆ
* ಡಾ. ಪುನೀತ್ ರಾಜಕುಮಾರ್ ಹೃದಯ ಆರೋಗ್ಯ ಯೋಜನೆ - ವೈದ್ಯರು, ಆಸ್ಪತ್ರೆಗಳು, ಡಿಫ್ರಿಬಿಲೇಟರ್ (ಎ.ಇ.ಡಿ) ಗಳನ್ನು ಕೊಂಡುಕೊಳ್ಳಲು ಸಹಾಯ ಧನ ಯೋಜನೆ.

## ವಸತಿ

### ಕುಟುಂಬಕ್ಕೊಂದು ಮನೆ

* ರಾಜ್ಯದ ಎಲ್ಲಾ ವಸತಿ ರಹಿತ ಕುಟುಂಬಗಳಿಗೂ 5 ವರ್ಷದೊಳಗೆ ಚಾಲ್ತಿಯಲ್ಲಿರುವ ಯೋಜನೆ ಮೂಲಕ ಸರಕಾರಿ ವಸತಿ ಸೌಲಭ್ಯ
* ಬಡವರಿಗಾಗಿ ನಿರ್ಮಿಸುವ ಯೋಜನೆಗಳಿಗೆ ರಾಜ್ಯ ಸರಕಾರದಿಂದ ರೂ 3.5 ಲಕ್ಷ ಸಬ್ಸಿಡಿ ಸಹಕಾರ

## ಸಮಾಜ ಕಲ್ಯಾಣ

## ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡ /ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರು

* ಎಸ್‌ಸಿ ಸಮುದಾಯಕ್ಕೆ ಶೇ 15 ರಿಂದ 17 ಕ್ಕೆ, ಎಸ್‌ಟಿ ಸಮುದಾಯಕ್ಕೆ ಶೇ 3 ರಿಂದ 7 ಕ್ಕೆ, ಅಲ್ಪಸಂಖ್ಯಾತರಿಗೆ ಶೇ 4 ರ ಮರುಸ್ಥಾಪನೆ, ಲಿಂಗಾಯತ, ಒಕ್ಕಲಿಗ ಮತ್ತಿತರ ಸಮುದಾಯಗಳ ಆಶೋತ್ತಗಳನ್ನು ಈಡೇರಿಸಲು ಮೀಸಲಾತಿಯನ್ನು ಶೇ 50 ರಿಂದ 75 ರವರೆಗೆ ಹೆಚ್ಚಿಸಲು ಸೂಕ್ತ ಕ್ರಮ.
* ವಿಧಾನಮಂಡಲದ ಮೊದಲ ಅಧಿವೇಶನದಲ್ಲೇ ಅಂಗೀಕಾರಕ್ಕಾಗಿ ನ್ಯಾಯಮೂರ್ತಿ ಸದಾಶಿವ ಆಯೋಗದ ವರದಿ ಮಂಡನೆ ಹಾಗೂ ಪರಿಶಿಷ್ಟ ಜಾತಿ ಮೀಸಲಾತಿ ಪಟ್ಟಿಯಲ್ಲಿರುವ ಉಪ ಪಂಗಡಗಳಿಗೆ ನ್ಯಾಯ ಕೊಡಿಸಲು ಕಾಂಗ್ರೆಸ್ ಪಕ್ಷ ಬದ್ಧ
* ಕಾಂಗ್ರೆಸ್ ಸರ್ಕಾರ ಸಿದ್ಧಪಡಿಸಿದ್ದ ಹಿಂದುಳಿದ ವರ್ಗಗಳ ಜನಗಣತಿ ವರದಿಯನ್ನು ಅನುಷ್ಠಾನಕ್ಕೆ ತರುವುದು.
* 5 ವರ್ಷಗಳಲ್ಲಿ ಎಲ್ಲಾ ಎಸ್‌ಸಿ/ಎಸ್‌ಟಿ ಕುಟುಂಬಗಳಿಗೆ ಮನೆ ನೀಡಲಿದ್ದು, ಸರಕಾರದಿಂದಲೇ ಮನೆಗಳ ನಿರ್ಮಾಣ
* ಐರಾವತ ಯೋಜನೆ- ಎಸ್‌ಸಿ/ಎಸ್‌ಟಿ ಕುಟುಂಬದ 25 ಸಾವಿರ ಯುವಕರಿಗೆ ಸ್ವ ಉದ್ಯೋಗಕ್ಕಾಗಿ ಟ್ಯಾಕ್ಸಿ, ಸರಕು ಸಾಗಣೆ ವಾಹನ, ತ್ರಿಚಕ್ರ ವಾಹನ, ಲಘು ವಾಹನಗಳ ಖರೀದಿಗೆ ಪ್ರತಿ ವರ್ಷ ಶೇ 3 ಬಡ್ಡಿದರದಲ್ಲಿ ಸಾಲ
* ಡಾ.ಭೀಮರಾವ್ ಅಂಬೇಡ್ಕರ್ ಉದ್ಯಮಶೀಲತಾ ನಿಧಿ ಸ್ಥಾಪನೆ- ಎಸ್‌ಸಿ ಸಮುದಾಯದ ಉದ್ಯಮಶೀಲರಿಗಾಗಿ ಉದ್ಯಮ ಅಭಿವೃದ್ಧಿ ಮತ್ತು ಇನ್‌ಕ್ಯುಬೇಷನ್ ಕಾರ್ಯಕ್ರಮಗಳಿಗಾಗಿ ರೂ 1 ಸಾವಿರ ಕೋಟಿ ಮೀಸಲು
* ಕೇಂದ್ರ ಸರಕಾರ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ಸ್ಕಾಲರ್‌ಶಿಪ್ ರದ್ದುಪಡಿಸಿದೆ. ಹೀಗಾಗಿ ಸ್ಕಾಲರ್‌ಶಿಪ್ ನೀಡಲು "ಮೈಸೂರು ಮಹಾರಾಜ ಶ್ರೀ ನಾಲ್ವಡಿ ಕೃಷ್ಣದೇವರಾಜ ಒಡೆಯರ್ ಸ್ಕಾಲರ್ ಯೋಜನೆ ಆರಂಭ
* ಸಾವಿತ್ರಿ ಬಾಯಿ ಪುಲೆ ಶಿಕ್ಷಣ ಯೋಜನೆ-1ರಿಂದ 5ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಮಾಸಿಕ ರೂ 150 ಪ್ರೋತ್ಸಾಹಧನ, 6ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಮಾಸಿಕ ರೂ 300 ಪ್ರೋತ್ಸಾಹಧನ. ವಿದ್ಯಾರ್ಥಿಯ ತಾಯಿಯ ಬ್ಯಾಂಕ್ ಖಾತೆಗೆ ನೇರ ಸಂದಾಯ

* ಚರ್ಮ ಉದ್ಯಮ ಕಲ್ಯಾಣಕ್ಕಾಗಿ ಲಿಡ್ಕರ್ ನಿಗಮಕ್ಕೆ ದುಪ್ಪಟ್ಟು ಅನುದಾನ
* ಬುಡಕಟ್ಟು ಸಮುದಾಯದ 100 ಸಾಧಕರಿಗೆ ತಲಾ ರೂ 1 ಲಕ್ಷ ಮೊತ್ತದ "ಆದಿವಾಸಿ ಸಿರಿ" ಪ್ರಶಸ್ತಿ ಗೌರವ
* ಎಲ್ಲಾ ಅಭಿವೃದ್ಧಿ ನಿಗಮ ಮತ್ತು ಮಂಡಳಿಗಳಿಗೆ ನೀಡುವ ಅನುದಾನ ಹೆಚ್ಚಳ
* ಒಬಿಸಿ ಉದ್ಯಮಶೀಲರನ್ನು ಉತ್ತೇಜಿಸಲು ಮತ್ತು ಉದ್ಯೋಗ ಸೃಷ್ಟಿಸಲು 5 ವರ್ಷದೊಳಗೆ 50 ಸಾವಿರ ಮಂದಿಗೆ ಶೇ 3ರ ಬಡ್ಡಿದರಲ್ಲಿ ಅಡಮಾನ ರಹಿತ ರೂ 10 ಲಕ್ಷದವರೆಗೆ ಸಾಲ
* ಮೂರ್ತಿ ಕೆತ್ತನೆ, ಕುಂಬಾರಿಕೆ, ನೇಕಾರಿಕೆ ಹಾಗೂ ಇತರ ವೃತ್ತಿಗಳಲ್ಲಿ ತೊಡಗಿರುವ ಹಿಂದುಳಿದ ವರ್ಗದವರ ಕಲ್ಯಾಣಕ್ಕೆ ರೂ 5 ಸಾವಿರ ಕೋಟಿಯೊಂದಿಗೆ ಸಾಮಾಜಿಕ ಆರ್ಥಿಕ ಕಲ್ಯಾಣ ನಿಧಿ ಸ್ಥಾಪನೆ
* ಹಿಂದುಳಿದ ವರ್ಗಗಳಲ್ಲಿ ಅತ್ಯಂತ ಹಿಂದುಳಿದ ಜಾತಿಗಳು ಪ್ರವರ್ಗ 1ರಲ್ಲಿವೆ. ಜನಸಂಖ್ಯೆಯ ಶೇ 12ರಷ್ಟು ಜನರು ಈ ವರ್ಗದಲ್ಲಿದ್ದಾರೆ. ಹಾವನೂರ್ ಆಯೋಗದ ಪ್ರಕಾರ 58 ಜಾತಿಗಳು ಬುಡಕಟ್ಟು ಸ್ವಭಾವ ಹೊಂದಿವೆ. ಅಲೆಮಾರಿ, ಅಲೆ ಅರೆಮಾರಿ ಜಾತಿಗಳು ಸಹ ಈ ಪ್ರವರ್ಗದಲ್ಲಿವೆ. ಈ ಪ್ರವರ್ಗದಲ್ಲಿರುವ ಜನರು ಶಿಕ್ಷಣ, ಉದ್ಯೋಗ, ಉದ್ಯಮಗಳಲ್ಲಿ ಅತಿ ಕನಿಷ್ಠ ಪಾಲು ಹೊಂದಿದ್ದಾರೆ. ಹಿಂದೆ ಈ ಪ್ರವರ್ಗದ ಜನರಿಗೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಸಿಗುವ ಸವಲತ್ತುಗಳೆಲ್ಲ ಸಿಗುತ್ತಿದ್ದವು. ಇತ್ತೀಚೆಗೆ ಆ ಎಲ್ಲ ಸವಲತ್ತುಗಳು ನಿಂತು ಹೋಗಿವೆ. 60 ದಿನಗಳಲ್ಲಿ ಈ ಪ್ರವರ್ಗದಲ್ಲಿರುವ ಎಲ್ಲ ಜಾತಿ ಜನರ ಸಮಗ್ರ ಅಭಿವೃದ್ಧಿಗೆ ಕಾರ್ಯಯೋಜನೆ ರಚನೆ
* ವಾರ್ಷಿಕ ರೂ. 500 ಕೋಟಿ, ಮತ್ತು 5 ವರ್ಷಕ್ಕೆ ರೂ 2,500 ಕೋಟಿ ಅನುದಾನ ನೀಡಿ ಬ್ರಹ್ಮಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮದ ಸ್ಥಾಪನೆ.
* ವಾರ್ಷಿಕ ರೂ. 500 ಕೋಟಿ, ಮತ್ತು 5 ವರ್ಷಕ್ಕೆ ರೂ 2,500 ಕೋಟಿ ಅನುದಾನ ನೀಡಿ, ಅತಿಸಣ್ಣ ಹಿಂದುಳಿದ ಸಮುದಾಯದ ಅಭಿವೃದ್ಧಿ ನಿಗಮದ ಸ್ಥಾಪನೆ.
* ತಿಗಳ, ಮಡಿವಾಳ, ಉಪ್ಪಾರ, ಬಲಿಜಾ, ಸವಿತಾ ಸಮಾಜ ಮತ್ತು ಅಲೆಮಾರಿ ಬುಡಕಟ್ಟು ಜನಾಂಗಗಳ ಅಭಿವೃದ್ಧಿಗಾಗಿ ನಿಗಮಗಳ ಸ್ಥಾಪನೆ ಮತ್ತು ಬಜೆಟ್‌ನಲ್ಲಿ ನಿಗದಿತ ಧನ ಅನುದಾನ.

## ನೇಕಾರರು

* ನೇಕಾರರ ಮಗ್ಗ ಆಧುನೀಕರಣಕ್ಕಾಗಿ ವರ್ಷಕ್ಕೆ  ರೂ 30 ಸಾವಿರ ಅನುದಾನ

## ಮಹಿಳೆ ಮತ್ತು ಮಕ್ಕಳು

ಹೆಣ್ಣಲ್ಲವೆ ಹೆತ್ತವಳು?

* ಪ್ರತಿ ಮನೆಯ ಯಜಮಾನಿಗೆ ತಿಂಗಳಿಗೆ ರೂ 2 ಸಾವಿರ ನೀಡಿಕೆ-ಗೃಹಲಕ್ಷ್ಮಿ ಯೋಜನೆ
* ಮಹಿಳಾ ಉದ್ಯಮಶೀಲತೆಗಾಗಿ ಪ್ರತಿ ವರ್ಷ 5 ಸಾವಿರ ಮಹಿಳೆಯರಿಗೆ ಬೆಂಬಲ
* ವಿಧವಾ ಪಿಂಚಣಿ ರೂ 2,500ಕ್ಕೆ ಹೆಚ್ಚಳ
* 5 ವರ್ಷಗಳಲ್ಲಿ 5 ಸಾವಿರ ಸ್ತ್ರೀ ಶಕ್ತಿ ಕಿರು ಉದ್ಯಮಗಳಿಗೆ ಪೋಷಣೆ. 21ನೇ ಶತಮಾನದ ಅಗತ್ಯಗಳಾದ ಆಹಾರ ಸಂಸ್ಕರಣೆ, ಕೇಟರಿಂಗ್, ಮೊಬೈಲ್ ಕ್ಯಾಂಟೀನ್, ಘನ ತ್ಯಾಜ್ಯ ನಿರ್ವಹಣೆ, ಪಾರ್ಕಿಂಗ್ ನಿರ್ವಹಣೆಯಂತಹ ಕ್ಷೇತ್ರಗಳಿಗೆ ಉತ್ತೇಜನ
* ಧಾರ್ಮಿಕ ಮತ್ತು ಭಾಷಾ ಅಲ್ಪಸಂಖ್ಯಾತರು ಸೇರಿದಂತೆ ಕಾನೂನಿನ ಎದುರು ಸಮಾನತೆ, ಎಲ್ಲರಿಗೂ ಸಂವಿಧಾನ ನೀಡಿದ ಹಕ್ಕು. ಆದರೆ ಅಧಿಕಾರಸ್ಥವಾದ ಭಾಜಪ ಸರಕಾರ ಅಧಿಕಾರವನ್ನು ಪಡೆಯುವ ಒಂದೇ ಉದ್ದೇಶದಿಂದ ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯಗಳನ್ನು ನಡೆಸುತ್ತ ರಾಜಕೀಯ ಧ್ರುವೀಕರಣವನ್ನು ತನ್ನ

ಮುಖ್ಯ ಗುರಿಯಾಗಿ ಇಟ್ಟುಕೊಂಡಿದೆ. ಅಲ್ಪಸಂಖ್ಯಾತ ಸಮುದಾಯಗಳನ್ನು ಒಳಗೊಂಡ ನಮ್ಮ ಸಮಾಜದ ಎಲ್ಲರೂ ಸಮಾನ ಅಭಿವೃದ್ಧಿ ಮತ್ತು ಕಲ್ಯಾಣಗಳ ಹಕ್ಕನ್ನು ಪಡೆದಿದ್ದಾರೆ ಎನ್ನುವ ಸಂವಿಧಾನ ಬದ್ಧತೆ ಕಾಂಗ್ರೆಸ್ ಪಕ್ಷದ ನಿಶ್ಚಿತ ನಂಬಿಕೆ. ಈ ನಿಟ್ಟಿನಲ್ಲಿ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ ಮತ್ತಿತರ ಅಲ್ಪಸಂಖ್ಯಾತ ಸಮುದಾಯಗಳ ಕಲ್ಯಾಣಕ್ಕಾಗಿ ಮತ್ತು ಧಾರ್ಮಿಕ ಪವಿತ್ರ ಕೇಂದ್ರಗಳ ಪುನರುಜ್ಜೀವನಕ್ಕಾಗಿ ಸಂಬಂಧಿತ ಅಭಿವೃದ್ಧಿ ನಿಗಮಗಳಿಗೆ ವಾರ್ಷಿಕ ರೂ. 10 ಸಾವಿರ ಕೋಟಿಗಳ ಅನುದಾನದ ಯೋಜನೆಯನ್ನು ಕೈಗೆತ್ತಿಕೊಂಡಿದೆ

## ಕಾಶ್ಮೀರಿ ವಲಸೆಗಾರ ಪಂಡಿತರು

* ಕಾಶ್ಮೀರದಿಂದ ವಲಸೆ ಬಂದ ಕರ್ನಾಟಕದಲ್ಲೇ ನೆಲೆಸಿರುವ ಕಾಶ್ಮೀರ ಪಂಡಿತ ಸಮುದಾಯಕ್ಕಾಗಿ:

ಎ) ಕಾಶ್ಮೀರ ಸಂಸ್ಕೃತಿ ಕೇಂದ್ರಕ್ಕೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಒಂದು ಬಾರಿಯ ಕೊಡುಗೆಯಾಗಿ ರೂ 15 ಕೋಟಿ ಹಾಗೂ ವಾರ್ಷಿಕ ರೂ 1 ಕೋಟಿ ಅನುದಾನ

## ಲಿಂಗತ್ವ ಅಲ್ಪಸಂಖ್ಯಾತರು

* 'ಮಂಗಳಮುಖಿ ಮಂಡಳಿ' ಸ್ಥಾಪನೆ - ವಾರ್ಷಿಕ ರೂ 100 ಕೋಟಿ ಅನುದಾನ ಮತ್ತು ಅದರ ಮೂಲಕ ರೂ 3 ಲಕ್ಷದವರೆಗೆ ಸ್ವ ಉದ್ಯೋಗಕ್ಕೆ ಅನುದಾನ

## ಪೌರಕಾರ್ಮಿಕರಿಗೆ ಅಭಯ ಹಸ್ತ

* ಎಲ್ಲಾ 25 ಸಾವಿರ ಪೌರಕಾರ್ಮಿಕರ ಸೇವೆ ಕಾಯಂ ಮತ್ತು ಸರಕಾರಿ ಸೌಲಭ್ಯಗಳ ವಿಸ್ತರಣೆ.
* ಪ್ರತಿಯೊಬ್ಬರಿಗೂ ರೂ 10 ಲಕ್ಷಗಳ ವಿಮಾ ಯೋಜನೆ
* ಸಮಾನಾಂತರವಾದ ಇತರ ಉದ್ಯೋಗಗಳಲ್ಲಿ ಇರುವಂತೆ ಅಪಾಯಕಾರಿ ಕೆಲಸಗಳಿಗೆ ಕೊಡುವ ಹೆಚ್ಚುವರಿ ವೇತನ

## ಚಾಲಕರು

* ಆಟೊ ಮತ್ತು ಟ್ಯಾಕ್ಸಿ ಚಾಲಕರ ಕಲ್ಯಾಣ ಯೋಜನೆಗಳಿಗಾಗಿ ಆಟೋ ಚಾಲಕರ ಮಂಡಳಿ ಮತ್ತು ಟ್ಯಾಕ್ಸಿ ಚಾಲಕರ ಮಂಡಳಿ ಸ್ಥಾಪನೆ ಹಾಗೂ ತಲಾ ರೂ 200 ಕೋಟಿ ಆವರ್ತನ ನಿಧಿ ಸ್ಥಾಪನೆ.

## ಬೀದಿಬದಿ ವ್ಯಾಪಾರಿಗಳು

* ಒಂದು ಬಾರಿಯ ನೆರವಿನ ರೂಪದಲ್ಲಿ ರೂ 20 ಸಾವಿರ ಅನುದಾನ

## ಅಸಂಘಟಿತ ಮತ್ತು ಗಿಗ್ ಕಾರ್ಮಿಕರು

* ಅಸಂಘಟಿತ ಕಾರ್ಮಿಕರ ಕಲ್ಯಾಣ ಮಂಡಳಿ ಸ್ಥಾಪನೆಗೆ ರೂ 3,000 ಕೋಟಿ ಹೂಡಿಕೆ

## ಹಿರಿಯ ನಾಗರಿಕರು

* ಶ್ರವಣ ಕುಮಾರ ಹಿರಿಯ ನಾಗರಿಕರ ಕಲ್ಯಾಣ ನಿಧಿ ಸ್ಥಾಪನೆಗಾಗಿ ರೂ 1 ಸಾವಿರ ಕೋಟಿ
* ಎರಡು ವರ್ಷಗಳಿಗೊಮ್ಮೆ ರಾಜ್ಯದ 15 ಪವಿತ್ರ ಸ್ಥಳಗಳು ಹಾಗೂ ದೇಶದ 10 ಯಾತ್ರಾ ತಾಣಗಳಿಗೆ ಉಚಿತ ಪ್ರವಾಸ
* ಕಾಶಿ, ಮಥುರಾ, ಕೈಲಾಸ ಮಾನಸಸರೋವರ ಯಾತ್ರೆಗೆ ನೀಡುವ ಒಂದು ಬಾರಿಯ ಸಬ್ಸಿಡಿ ಮೊತ್ತ ಹೆಚ್ಚಳ

## ವಿಶೇಷ ಚೇತನರು

* ಅಂಗವಿಕಲ ಮಹಿಳೆಯರಿಗೆ ಸ್ವಯಂ ಉದ್ಯೋಗಕ್ಕೆ ರೂ 3 ಲಕ್ಷದವರೆಗೆ ಬಡ್ಡಿ ರಹಿತ ಸಾಲ
* ವಿದ್ಯಾ ದೀಪ ನಿಧಿ- ಅಂಗವಿಕಲ ಯುವಕರು ಭಾರತ ಮತ್ತು ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆಯುವಂತಾಗಲು ಸ್ಕಾಲರ್‌ಶಿಪ್‌ಗಾಗಿ ರೂ 50 ಕೋಟಿಯ ವಿದ್ಯಾ ದೀಪ ನಿಧಿ ಸ್ಥಾಪನೆ
* ಅಂಗವಿಕಲರಿಗೆ ಹಾಗೂ ಅವರ ಜತೆಗೆ ಇರುವ ಒಬ್ಬರಿಗೆ ಉಚಿತ ಬಸ್ ಪಾಸ್

## ದೇಶ ರಕ್ಷಿಸಿದ ನಿವೃತ್ತ ಸೇನಾ ಸಿಬ್ಬಂದಿಯ ಕಲ್ಯಾಣ

* ಸ್ವಂತ ಉದ್ಯೋಗ/ ಉದ್ದಿಮೆಗಳನ್ನು ಸ್ಥಾಪಿಸಲು **ಫೀಲ್ಡ್ ಮಾರ್ಶಲ್ ಜನರಲ್ ಕಾರ್ಯಪ್ಪ ನಿವೃತ್ತ ಸೈನಿಕ ಅಭಿವೃದ್ಧಿ ನಿಗಮ** ಸ್ಥಾಪನೆ ಮತ್ತು ರೂ 250 ಕೋಟಿ ವಾರ್ಷಿಕ ಆವರ್ತನ ನಿಧಿ. ಶೇ 5 ಬಡ್ಡಿದರದಲ್ಲಿ ರೂ 10 ಲಕ್ಷದವರೆಗೆ ಸಾಲ
* ಲೋಪದೋಷಗಳನ್ನು ಸರಿಪಡಿಸಿ ಒಆರ್‌ಒಪಿ - ಒಂದು ಹುದ್ದೆ ಒಂದು ಪಿಂಚಣಿ ಯೋಜನೆಯನ್ನು ಅನುಷ್ಠಾನಕ್ಕೆ ತರುವಂತೆ ಕೇಂದ್ರ ಸರಕಾರದ ಮೇಲೆ ಒತ್ತಡ

## ಪತ್ರಕರ್ತರ ಕಲ್ಯಾಣ

* ಪತ್ರಕರ್ತರ ಕಲ್ಯಾಣ ನಿಧಿ ಸ್ಥಾಪನೆಗೆ ರೂ 500 ಕೋಟಿ ಮೀಸಲು

## ಅನಿವಾಸಿ ಕನ್ನಡಿಗರು

* ಅನಿವಾಸಿ ಕನ್ನಡಿಗರ ವ್ಯವಹಾರಕ್ಕಾಗಿ ಪ್ರತ್ಯೇಕ ಸಚಿವಾಲಯ
* ಅನಿವಾಸಿ ಕನ್ನಡಿಗರು ರಾಜ್ಯದಲ್ಲಿ ಉದ್ಯಮ ನಡೆಸಲು ಉತ್ತೇಜನ-ರೂ 1,000 ಕೋಟಿ ಆವರ್ತನ ನಿಧಿ

## ಯುವ ಶಕ್ತಿ – ಕ್ರೀಡೆ – ತರಬೇತಿ – ಉದ್ಯೋಗ.

* ಯುವ ನಿಧಿ- ಕಾಲೇಜು ಪದವಿ ಮುಗಿಸಿ 180 ದಿನಗಳಾದರೂ ಉದ್ಯೋಗ ಲಭಿಸದ 18 ರಿಂದ 25 ವರ್ಷದೊಳಗಣ ಯುವಕರ ಮಾಹಿತಿ ಸಂಗ್ರಹ. ಮತ್ತು ಪದವೀಧರರಿಗೆ ಮಾಸಿಕ ರೂ 3 ಸಾವಿರ ಹಾಗೂ ಡಿಪ್ಲೊಮಾ ಮಾಡಿದವರಿಗೆ ರೂ 1,500 ನಿರುದ್ಯೋಗ ಭತ್ಯೆ ಪಾವತಿ
* ಪ್ರತಿ ಪಂಚಾಯತ್‌ನಲ್ಲಿ ಭಾರತ್ ಜೋಡೊ ಯುವಶಕ್ತಿ, ಉದ್ಯೋಗ ಮಾಹಿತಿ ಕೇಂದ್ರಗಳ ಸ್ಥಾಪನೆ
* ತಳ ಹಂತದ ವೈಜ್ಞಾನಿಕ ಸಂಶೋಧನೆಗಳಿಗಾಗಿ ಭಾರತರತ್ನ ಸಿ.ಎನ್.ಆರ್.ರಾವ್ ಹೆಸರಿನಲ್ಲಿ ಕರ್ನಾಟಕ ಯುವ ಸಂಶೋಧನಾ ನಿಧಿಯ ಸ್ಥಾಪನೆ. ಮೂಲಧನ ರೂ 500 ಕೋಟಿ
* ಯುವಕರ ಸಮಗ್ರ ಅಭಿವೃದ್ಧಿಗಾಗಿ ಯುವ ಆಯೋಗ ರಚನೆ
* ಕ್ರೀಡೆಗಾಗಿ ವಾರ್ಷಿಕ ರೂ 2,000 ಕೋಟಿ ಅನುದಾನ
* ಮೈಸೂರಿನಲ್ಲಿ ಪ್ರತ್ಯೇಕ ಕ್ರೀಡಾ ವಿಶ್ವವಿದ್ಯಾಲಯ ಸ್ಥಾಪನೆ- ವಿಶ್ವ ದರ್ಜೆಯ ಕ್ರೀಡಾ ಹಬ್ ಆಗಿ ಮಾರ್ಪಡಿಸಲು ಕ್ರಮ. ಹಾಗೂ ಸಾಂಪ್ರದಾಯಿಕ ಕ್ರೀಡೆಗಳಿಗಾಗಿಯೇ ಮೈಸೂರಿನಲ್ಲಿ ಅಂತರರಾಷ್ಟ್ರೀಯ ಕ್ರೀಡಾ ಸಂಕೀರ್ಣ ಸ್ಥಾಪನೆ
* ಪ್ರತಿಭಾನ್ವಿತ ಕ್ರೀಡಾಪಟುಗಳಿಗೆ ತರಬೇತಿ ನೀಡುವುದಕ್ಕೆ ಆದ್ಯತೆ- ಪ್ರತಿ ವರ್ಷ 1,000 ವಿದ್ಯಾರ್ಥಿಗಳಿಗೆ ನೆರವು

## ಭಾಷೆ, ಸಾಹಿತ್ಯ, ಸಂಪ್ರದಾಯ ಮತ್ತು ಸಂಸ್ಕೃತಿ

### ಹಚ್ಚೇವು ಕನ್ನಡದ ದೀಪ

* ಕುವೆಂಪು ಜನ್ಮಸ್ಥಳ ಕುಪ್ಪಳಿಯನ್ನು ನೈಸರ್ಗಿಕ ಪ್ರವಾಸಿ ಕಲಾಕೇಂದ್ರವನ್ನಾಗಿ ಅಭಿವೃದ್ಧಿಪಡಿಸಲು ರೂ 100 ಕೋಟಿಗಳ ವಿಶೇಷ ಕ್ರಿಯಾ ಯೋಜನೆ
* ಗಡಿಭಾಗದ 63 ತಾಲೂಕುಗಳಲ್ಲಿ ಹಾಗೂ ಕನ್ನಡಿಗರು ದೊಡ್ಡ ಸಂಖ್ಯೆಯಲ್ಲಿರುವ ನೆರಯ ಆರು ರಾಜ್ಯಗಳಲ್ಲಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ, ಶಿಕ್ಷಣಕ್ಕೆ ಉತ್ತೇಜನ ನೀಡಲು ವಾರ್ಷಿಕ ರೂ 200 ಕೋಟಿ
* ಕೂಡಲಸಂಗಮದಲ್ಲಿ ಸಾಮಾಜಿಕ ಒಳಗೊಳ್ಳುವಿಕೆ ಮತ್ತು ಧಾರ್ಮಿಕ ಸಾಮರಸ್ಯ ಸಂಸ್ಥೆ ಸ್ಥಾಪನೆಗಾಗಿ **ಬಸವಪಥ ಸಂಸ್ಥೆಗೆ** ರೂ 100 ಕೋಟಿ ಬಿಡುಗಡೆ
* **ಕುವೆಂಪು ಕನ್ನಡ ಸಾಹಿತ್ಯ ಪುರಸ್ಕಾರ ಅಭಿಯಾನ**- 500 ಮಂದಿ ಯುವ ಕವಿಗಳು ಮತ್ತು ಬರಹಗಾರರಿಗೆ ತಲಾ ರೂ 25 ಸಾವಿರ ಹಣಕಾಸಿನ ನೆರವು ನೀಡುವ ಯೋಜನೆ
* ಕನ್ನಡದ ಮಾತೆ ತಾಯಿ **ಭುವನೇಶ್ವರಿಯ ಏಕೈಕ ದೇವಸ್ಥಾನ** ಇರುವ ಸಿದ್ದಾಪುರದ ಭುವನಗಿರಿ ರೂ 10 ಕೋಟಿ ವೆಚ್ಚದಲ್ಲಿ ಪ್ರವಾಸಿ ತಾಣವಾಗಿ ಅಭಿವೃದ್ಧಿ
* ಪಾರ್ತಿಸುಬ್ಬ ಯಕ್ಷಗಾನ ಅಭಿವೃದ್ಧಿ ಮಂಡಳಿ ಸ್ಥಾಪನೆಗೆ ವಾರ್ಷಿಕ ರೂ 5 ಕೋಟಿ ಅನುದಾನ
* ಮೈಸೂರಿನಲ್ಲಿ ಕನ್ನಡಕ್ಕಾಗಿಯೇ ಮೀಸಲಿಡುವ **ಬಿಎಂಶ್ರೀ ಸ್ಮಾರಕ** ಅತ್ಯಂತ ದೊಡ್ಡ **ಗ್ರಂಥಾಲಯ** ಸ್ಥಾಪನೆ
* **ಸುಬ್ಬಯ್ಯ ನಾಯ್ಡು ನಿಧಿ**- ಜಾನಪದ ಮತ್ತು ಸಾಂಪ್ರದಾಯಿಕ ಕಲೆ/ ಕ್ರೀಡೆಗಳ ಪೋಷಣೆಗಾಗಿ ಈ ನಿಧಿಗೆ ರೂ 500 ಕೋಟಿ
* ಕರ್ನಾಟಕದ ಸಾಮಾಜಿಕ ವಿಷಯಗಳು ಮತ್ತು ಪರಂಪರೆಯನ್ನು ಆಧರಿಸಿ ಸಾಕ್ಷ್ಯಚಿತ್ರ/ ಸಿನಿಮಾ ನಿರ್ದೇಶಿಸುವ 10 ಯುವ ನಿರ್ದೇಶಕರಿಗೆ **ದೇವಿಕಾರಾಣಿ ರೋರಿಚ್** ಹೆಸರಲ್ಲಿ ತಲಾ ರೂ 1 ಲಕ್ಷ ಫೆಲೋಶಿಪ್
* ಯುವ ಸಾಹಿತಿಗಳು ಮತ್ತು ಗಾಯಕರ ಗೌರವಕ್ಕಾಗಿ **ಪಿ. ಕಾಳಿಂಗ ರಾವ್ ಸುಗಮ ಸಂಗೀತ ಫೆಲೋಶಿಪ್** ನಿಧಿಗೆ ರೂ 30 ಕೋಟಿ
* ಕನ್ನಡವನ್ನು ಸಶಕ್ತವಾಗಿ ಗಣಕೀಕರಣಗೊಳಿಸಲು **ಆಲೂರು ವೆಂಕಟರಾವ್** ನಿಧಿಗೆ ರೂ 100 ಕೋಟಿ ಅನುದಾನ
* ಚಿತ್ರದುರ್ಗದಲ್ಲಿ ಅತ್ಯಾಧುನಿಕ **ವೀರ ಮದಕರಿ ನಾಯಕ** ಮ್ಯೂಸಿಯಂ ಮತ್ತು ಥೀಂ ಪಾರ್ಕ್ ಸ್ಥಾಪನೆ
* **ತಾಯಿ ಭುವನೇಶ್ವರಿ ಸ್ಮಾರಕ ನಿಧಿ**-ರಾಜ್ಯದಲ್ಲಿರುವ ಎಲ್ಲಾ ಎಎಸ್ಐ ತಾಣಗಳಲ್ಲಿನ ಸ್ಮಾರಕಗಳ ಸೂಕ್ತ ನಿರ್ವಹಣೆಗಾಗಿ ಈ ನಿಧಿಗೆ ರೂ 500 ಕೋಟಿ
* **ಶಿವರಾಮ ಕಾರಂತ ಸಾಹಿತ್ಯ ನಿಧಿ**- 8ರಿಂದ 12ನೇ ತರಗತಿ ವರೆಗಿನ ವಿದ್ಯಾರ್ಥಿಗಳಿಗೆ ಕನ್ನಡ ಕವಿತೆ, ಗದ್ಯ ಬರೆಯುವುದಕ್ಕೆ ಉತ್ತೇಜನ ನೀಡಲು ರೂ 100 ಕೋಟಿ ಅನುದಾನ
* **ಜಿ.ಎಸ್.ಶಿವರುದ್ರಪ್ಪ ಕನ್ನಡ ಭಾಷಾ ಅಧ್ಯಯನ ಪುರಸ್ಕಾರ ನಿಧಿ**- ಕನ್ನಡ ಸಾಹಿತ್ಯದಲ್ಲಿ ಪಿಎಚ್‌ಡಿ ಮಾಡುವವರಿಗೆ ವಾರ್ಷಿಕ ರೂ 1 ಲಕ್ಷ ಅನುದಾನ ಹಾಗೂ ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ ವ್ಯಾಸಂಗ ಮಾಡುವವರಿಗೆ ವಾರ್ಷಿಕ ರೂ 25 10 ಸಾವಿರ ಅನುದಾನ

* ಸಂಖ್ಯಾ ಮಿತಿಗಳನ್ನು ನಿಗದಿಪಡಿಸಿ ರಾಜ್ಯೋತ್ಸವ, ಮತ್ತಿತರ ಅಕಾಡೆಮಿಗಳ ಪ್ರಶಸ್ತಿ ಮೊತ್ತ ದುಪ್ಪಟ್ಟು
* ಕನ್ನಡ ರಂಗಭೂಮಿ, ಜನಪದ ಕಲೆ, ಜನಪದ ಹಾಡುಗಳ ಉತ್ತೇಜನಕ್ಕೆ ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ **ಗುಬ್ಬಿವೀರಣ್ಣ ಬಯಲು ರಂಗಮಂದಿರಗಳ** ಸ್ಥಾಪನೆ
* **ಕರ್ನಾಟಕ ಅರುಣೋದಯ ದ.ರಾ.ಬೇಂದ್ರೆ ಸಮಾವೇಶ**- ಸ್ಥಳೀಯ ಜನಪದ ಕಲೆ, ಸಂಗೀತ ಉತ್ತೇಜನಕ್ಕೆ ಪ್ರತಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಾಂಸ್ಕೃತಿಕ ಉತ್ಸವಗಳ ಆಯೋಜನೆ
* ತುಳು ಸಾಹಿತ್ಯ ಅಕಾಡೆಮಿಗೆ ತುಳು ಭಾಷಾ ಅಭಿವೃದ್ಧಿ ಪ್ರಾಧಿಕಾರದ ಸ್ಥಾನಮಾನ ನೀಡಿ ಪ್ರಾಧಿಕಾರದ ಅಧ್ಯಕ್ಷರಿಗೆ ರಾಜ್ಯ ಸಚಿವ ಸ್ಥಾನಮಾನ, ವಾರ್ಷಿಕ ರೂ 5 ಕೋಟಿ ಅನುದಾನ
* ವಿಶಿಷ್ಟವಾದ ಕೊಡವ ಸಂಸ್ಕೃತಿಯ ಅಭಿವೃದ್ಧಿಗಾಗಿ ಕೊಡವ ಅಕಾಡೆಮಿಗೆ ರೂ 1 ಕೋಟಿ ಅನುದಾನ

## ದೇವಸ್ಥಾನಗಳು ಮತ್ತು ಯಾತ್ರಾ ಕೇಂದ್ರಗಳು

* ಕರ್ನಾಟಕದಲ್ಲಿ 1.80 ಲಕ್ಷಕ್ಕೂ ಅಧಿಕ ದೇವಸ್ಥಾನಗಳಿದ್ದು, ಆ ಪೈಕಿ 35,500 ದೇವಸ್ಥಾನಗಳಷ್ಟೇ ಮುಜರಾಯಿ ಇಲಾಖೆಗೆ ಒಳಪಟ್ಟಿವೆ. ಈ ದೇವಸ್ಥಾನಗಳಲ್ಲಿ ಶೇ 30ರಷ್ಟು ಅರ್ಚಕರು ದಲಿತರಾಗಿದ್ದು, ಶೇ 40ರಷ್ಟು ಮಂದಿ ಲಿಂಗಾಯತ ಮತ್ತು ಒಬಿಸಿಗಳು. ಈ ದೇವಸ್ಥಾನಗಳು ಮುಜರಾಯಿ ಇಲಾಖೆಯಿಂದ ನಿರ್ಲಕ್ಷಿಸಲ್ಪಟ್ಟಿದ್ದು, ಅವುಗಳಿಗೆ ವಿಶೇಷ ಪೂಜಾ ನಿಧಿ ಸ್ಥಾಪನೆ
* ಕಾಂಗ್ರೆಸ್ ಸರಕಾರ ಸ್ಥಾಪಿಸಿದ್ದ ಆರಾಧನಾ ಕಾರ್ಯಕ್ರಮದ ಮರು ಅನುಷ್ಠಾನ
* **ಧಾರ್ಮಿಕ ನಿಧಿ**-ರಾಜ್ಯದೆಲ್ಲೆಡೆ ಸಣ್ಣ ದೇವಸ್ಥಾನಗಳು ಮತ್ತು ಮಠಗಳ ನವೀಕರಣ ಮತ್ತು ಜೀರ್ಣೋದ್ಧಾರಕ್ಕೆ ರೂ 1 ಸಾವಿರ ಕೋಟಿ ಮೀಸಲು
* ಮುಜರಾಯಿ ದೇವಸ್ಥಾನಗಳಿಗೆ ಮಾಸಿಕ ಅನುದಾನ ಹೆಚ್ಚಳ
* **ಅರ್ಚಕ ಗೌರವ ನಿಧಿ**- ದೇವಸ್ಥಾನಗಳು ಮತ್ತು ಇತರ ಧಾರ್ಮಿಕ ಕೇಂದ್ರಗಳ 60 ವರ್ಷ ಮೀರಿದ ಎಲ್ಲಾ ಅರ್ಚಕರಿಗೆ ಮಾಸಿಕ ರೂ 5 ಸಾವಿರ ಗೌರವಧನ
* ಗ್ರಾಮೀಣ ಪ್ರದೇಶಗಳ ಸಣ್ಣ ದೇವಸ್ಥಾನಗಳಲ್ಲಿ ಪೂಜಾದ್ರವ್ಯಗಳ ಖರ್ಚು, ಗೌರವಧನ ಸಮರ್ಪಣೆ ಮೊದಲಾದ ವೆಚ್ಚಗಳನ್ನು ಸರಿದೂಗಿಸುವ ಸಲುವಾಗಿ ಅರ್ಚಕರಿಗೆ ಈಗ ನೀಡುತ್ತಿರುವ ಸಂಭಾವನೆ ರೂ 5 ಸಾವಿರಕ್ಕೆ. ಮುಜರಾಯಿ ಇಲಾಖೆಯ ಅಡಿಯಲ್ಲೇ ಈ ಯೋಜನೆ ಸೇರ್ಪಡೆ. ವಿವಿಧ ನಂಬಿಕೆಗಳನ್ನು ಹೊಂದಿರುವ ಸ್ಥಳೀಯ ಜನರೇ ನಿರ್ವಹಿಸುತ್ತಿರುವ ಎಲ್ಲಾ ಗ್ರಾಮದೇವತೆಗಳನ್ನೂ ಮುಜರಾಯಿ ಇಲಾಖೆಯ ಸುಪರ್ದಿಗೆ ತರಲು ಪಕ್ಷ ಬದ್ಧ
* ಗ್ರಾಮ ಮಟ್ಟದಲ್ಲಿ ನಡೆಯುವ ಎಲ್ಲಾ ಗ್ರಾಮ ದೇವತೆ ಮತ್ತು ತೇರು ಹಬ್ಬಗಳಿಗೆ ರೂ 20 ಸಾವಿರ ದೇಣಿಗೆ

## ಕಲ್ಯಾಣ ಕರ್ನಾಟಕ

* ಕಲ್ಯಾಣ ಕರ್ನಾಟಕದ ಮೂಲಸೌಕರ್ಯ ಅಭಿವೃದ್ಧಿಗಾಗಿ ಪ್ರತಿ ವರ್ಷ 5 ಸಾವಿರ ಕೋಟಿ
* ಬಳ್ಳಾರಿ ಅಂತಾರಾಷ್ಟ್ರೀಯ ಗುಣಮಟ್ಟದ ಜೀನ್ ಬಟ್ಟೆಗಳ ರಾಷ್ಟ್ರೀಯ ಕೇಂದ್ರವಾಗುವಂತೆ ರೂ.5000 ಕೋಟಿಯ ಹೂಡಿಕೆಯೊಂದಿಗೆ ಅಪರಲ್ ಪಾರ್ಕ್ ನಿರ್ಮಿಸಿ ಉದ್ಯೋಗವನ್ನು ಹೆಚ್ಚಿಸಲು ಕ್ರಮ.
* ಬೀದರ್‌ನಲ್ಲಿ ಐಐಟಿ ಮತ್ತು ರಾಯಚೂರಿನಲ್ಲಿ ಅಖಿಲ ಭಾರತ ವೈದ್ಯ ವಿಜ್ಞಾನ ಸಂಸ್ಥೆ (ಏಮ್ಸ್) ಸ್ಥಾಪನೆಗೆ ಕೇಂದ್ರ ಸರಕಾರದ ಮೇಲೆ ಒತ್ತಾಯ ಮತ್ತು ಸಹಯೋಜನೆ
* ಗ್ರಾಮ ಪಂಚಾಯತ್‌ಗಳಿಗೆ ವರ್ಷಕ್ಕೆ ತಲಾ 1 ಕೋಟಿ ಅನುದಾನ
* ಕಲ್ಯಾಣ ಕರ್ನಾಟಕದ 41 ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಕನಿಷ್ಠ 100 ಪಿಯುಸಿ ಮತ್ತು ಒಂದು ಮಹಿಳಾ ಪದವಿ ಕಾಲೇಜು ಸ್ಥಾಪನೆ

* ಪ್ರತಿ ಹೋಬಳಿಯಲ್ಲಿ ಒಂದೊಂದು ಬಾಬಾ ಸಾಹೇಬ್ ಅಂಬೇಡ್ಕರ್ ಇಂಗ್ಲಿಷ್ ಮಾಧ್ಯಮ ಪ್ರಾಥಮಿಕ ಮತ್ತು ಪ್ರೌಢಶಾಲೆ ಸ್ಥಾಪನೆ
* ಎರಡು ವರ್ಷದೊಳಗೆ 2,500 ಹೊಸ ಶಾಲಾ ಕೊಠಡಿ ನಿರ್ಮಾಣ ಹಾಗೂ ಖಾಲಿ ಇರುವ ಎಲ್ಲಾ ಶಿಕ್ಷಕ ಹುದ್ದೆಗಳ ಭರ್ತಿ
* ಕಲಬುರಗಿ-ಸಿರುಗುಪ್ಪ-ಬಳ್ಳಾರಿ ಹೆದ್ದಾರಿ ಷಟ್ಪಥವಾಗಿ ಅಗಲೀಕರಣ

## ಕಿತ್ತೂರು ಕರ್ನಾಟಕ

* ಕಿತ್ತೂರು ಕರ್ನಾಟಕ ಅಭಿವೃದ್ಧಿ ಮಂಡಳಿ ರಚನೆ-ರೂ 5 ಸಾವಿರ ಕೋಟಿ ಮೀಸಲು
* ಮಹಾರಾಷ್ಟ್ರ ಗಡಿಭಾಗದ ಎಲ್ಲಾ ಕನ್ನಡ ಶಾಲೆಗಳಿಗೆ ಒಂದು ಬಾರಿಯ ಮೂಲಸೌಲಭ್ಯ ದೇಣಿಗೆಯಾಗಿ ರೂ 1 ಕೋಟಿ ಹಾಗೂ ಮಾಸಿಕ ರೂ 1 ಲಕ್ಷ ಸಬ್ಸಿಡಿ ಮತ್ತು ಶಿಕ್ಷಕರ ನೇಮಕಾತಿ
* ಕಾರವಾರ, ಧಾರವಾಡ, ವಿಜಯಪುರ ಹಾಗೂ ಬಾಗಲಕೋಟೆಗಳಲ್ಲಿ 500 ಹಾಸಿಗೆಗಳ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ನಿರ್ಮಾಣ
* ಪ್ರತಿ ಜಿಲ್ಲೆಯಲ್ಲಿ ಬೇಳೆ/ಕಾಳುಗಳ ದಾಸ್ತಾನು ಕೇಂದ್ರ ಸ್ಥಾಪನೆ
* ಮಲಪ್ರಭಾ ನದಿಯನ್ನು ಒತ್ತುವರಿಯಿಂದ ಮುಕ್ತವಾಗಿಡಲು ಕ್ರಮ
* ಕಾರವಾರ ಬಂದರಿಗೆ ಸಂಪರ್ಕ ಕಲ್ಪಿಸುವ ಎಲ್ಲಾ ಜಿಲ್ಲೆಗಳಿಗೂ ಗುಣಮಟ್ಟದ ಸಂಪರ್ಕ ರಸ್ತೆ ನಿರ್ಮಾಣ. ಅದರ ಭಾಗವಾಗಿ ವಿಜಯಪುರ, ಬಾಗಲಕೋಟೆ, ಗದಗ, ಧಾರವಾಡ ಮೂಲಕ ಸಾಗುವ ಹೆದ್ದಾರಿಗಳ ಅಭಿವೃದ್ಧಿ

## ಕರಾವಳಿ /ಮಲೆನಾಡು ಕರ್ನಾಟಕ

* ವಾರ್ಷಿಕ ರೂ. 500 ಕೋಟಿ, ಮತ್ತು 5 ವರ್ಷಕ್ಕೆ ರೂ 2,500 ಕೋಟಿ ಅನುದಾನ ನೀಡಿ **ಬ್ರಹ್ಮಶ್ರೀ ನಾರಾಯಣ ಗುರು ಅಭಿವೃದ್ಧಿ ನಿಗಮ**ದ ಸ್ಥಾಪನೆ.
* ಅಡಿಕೆಗೆ ಹಳದಿ ರೋಗ ಮತ್ತು ಇತರ ರೋಗಗಳ ನಿಯಂತ್ರಣ ಹಾಗೂ ಮಾರುಕಟ್ಟೆ, ಸಂಶೋಧನೆಗೆ ಕ್ರಮ
* ಮಲೆನಾಡಿನ ರೈತರಿಗೆ ಅನಾನುಕೂಲವಾಗಿರುವ ಕಸ್ತೂರಿರಂಗನ್ ವರದಿಯ ಮರುಪರಿಶೀಲನೆ ಹಾಗೂ ಅರಣ್ಯ ಮತ್ತು ಪರಿಸರ ರಕ್ಷಣೆಗೆ ಪಶ್ಚಿಮ ಘಟ್ಟ ನೀತಿ
* ಮಂಗಳೂರು, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕಡಲತೀರದ ಪ್ರವಾಸೋದ್ಯಮ ಅಭಿವೃದ್ಧಿಗೆ ಕರಾವಳಿ ಬೀಚ್ ಪ್ರವಾಸೋದ್ಯಮ ಪ್ರಾಧಿಕಾರ ರಚನೆ ಮತ್ತು ಯೋಜನೆ
* ಶರಾವತಿ ಯೋಜನೆ ಮುಳುಗಡೆ ಸಂತ್ರಸ್ತರಿಗೆ ಕಾಲಮಿತಿಯಲ್ಲಿ ಪರಿಹಾರ ನೀಡಲು ಯೋಜನೆ ಮತ್ತು ಸಂಬಂಧಿತ ಕಾನೂನುಗಳ ತಿದ್ದುಪಡಿ
* ಮೀನುಗಾರ ಸಮುದಾಯದ ಸರ್ವಾಂಗೀಣ ಅಭಿವೃದ್ಧಿಗೆ ಈ ಕೆಳಗಿನ ಕಾರ್ಯಕ್ರಮ ಹಮ್ಮಿಕೊಳ್ಳಲಾಗುವುದು

ಎ) ವಿಮಾ ರಕ್ಷೆ

ಬಿ) ಎಲ್ಲಾ ಮೀನುಗಾರ ಮಹಿಳೆಯರಿಗೆ ರೂ 1 ಲಕ್ಷದವರೆಗೆ ಬಡ್ಡಿ ರಹಿತ ಸಾಲ

ಸಿ) ಉತ್ತಮ ಮೀನುಗಾರಿಕಾ ದೋಣಿ ಖರೀದಿಗೆ ಶೇ 50ರಷ್ಟು ಸಬ್ಸಿಡಿ

ಡಿ) ಪ್ರತಿ ದಿನದ ಡೀಸೆಲ್ ಬಳಕೆ ಪ್ರಮಾಣ 500 ಲೀಟರ್‌ಗೆ ಹೆಚ್ಚಳ

ಇ) ಬಂದರಿನಿಂದ ಮಾರುಕಟ್ಟೆಗೆ ಸೂಕ್ತ ಸಾರಿಗೆ ವ್ಯವಸ್ಥೆ

* ಮಂಗಳೂರಿನಿಂದ ಬೆಂಗಳೂರಿಗೆ ಸಂಪರ್ಕ ಕಲ್ಪಿಸುವ, ಶಿರಾಡಿ, ಚಾರ್ಮಾಡಿ, ಸಂಪಾಜೆ ಘಾಟಿಗಳ ಮೂಲಕ ಸಾಗುವ ರಾಷ್ಟ್ರೀಯ ಹೆದ್ದಾರಿಗಳನ್ನು ಕೇಂದ್ರ ಸರಕಾರದ ಸಹಯೋಗದೊಂದಿಗೆ ಸರ್ವ ಋತು ಷಟ್ಪಥ ರಸ್ತೆಯನ್ನಾಗಿ ಮೇಲ್ದರ್ಜೆಗೆ ಏರಿಸಲಾಗುವುದು
* ಮಂಗಳೂರು ಅಂತರರಾಷ್ಟ್ರೀಯ ವಿಮಾನನಿಲ್ದಾಣದ ಸಮೀಪ ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರ ಸ್ಥಾಪನೆ

* ಸಸಿಹಿತ್ಲು ಕಡಲ ತೀರವನ್ನು ಅಂತರರಾಷ್ಟ್ರೀಯ ಸರ್ಫಿಂಗ್ ತಾಣವಾಗಿ ಅಭಿವೃದ್ಧಿ
* ಮಂಗಳೂರು ಮೀನುಗಾರಿಕಾ ಬಂದರಿಗೆ ಕಾಯಂ ಹೂಳೆತ್ತುವ ಯಂತ್ರ

## ಮೈಸೂರು ಕರ್ನಾಟಕ

* ಮೈಸೂರು ಕರ್ನಾಟಕದ ಸಮಗ್ರ ಅಭಿವೃದ್ಧಿಗಾಗಿ ರೂ 5 ಸಾವಿರ ಕೋಟಿಗಳ ಹೂಡಿಕೆ
* ಮಂಡ್ಯದಲ್ಲಿ ಮೈಶುಗರ್ ಕಾರ್ಖಾನೆ ಪುನಶ್ಚೇತನ ಮತ್ತು ಹೊಸ ಸಕ್ಕರೆ ಕಾರ್ಖಾನೆ ನಿರ್ಮಾಣಕ್ಕೆ ಯೋಜನೆ-ಅನುಷ್ಠಾನ
* ಮೈಸೂರಿನಲ್ಲಿ 500 ಕೋಟಿ ಬಜೆಟ್‌ನೊಂದಿಗೆ ವಿಶ್ವದರ್ಜೆಯ ಡಾ. ರಾಜ್ ಕುಮಾರ್ ಫಿಲ್ಮ್‌ಸಿಟಿ ನಿರ್ಮಾಣ
* ಮೈಸೂರಿನಲ್ಲಿ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾ ವಿಶ್ವವಿದ್ಯಾಲಯ ಮತ್ತು ಕ್ರೀಡಾ ಸಂಕೀರ್ಣ ಸ್ಥಾಪನೆ

## ನಮ್ಮ ಬೆಂಗಳೂರು

* ಬಿಬಿಎಂಪಿ ನಿರ್ವಹಣೆಗಾಗಿಯೇ ಸಮಗ್ರ ಶಾಸನ ಜಾರಿ. ಈ ಮೂಲಕ ನೀರು ಸಬರರಾಜು, ಒಳಚರಂಡಿ, ಸಾರಿಗೆ, ವಸತಿ, ವಿದ್ಯುತ್ ಹಾಗೂ ಅಭಿವೃದ್ಧಿ ಪ್ರಾಧಿಕಾರಗಳನ್ನು ಒಂದೇ ವೇದಿಕೆಯ ಅಡಿಯಲ್ಲಿ ತರಲು ಕ್ರಮ
* ಉತ್ತರ ದಕ್ಷಿಣ, ದಕ್ಷಿಣ-ಪೂರ್ವ ದೀರ್ಘ ಎತ್ತರಿಸಿದ ಫ್ಲೈಓವರ್ ಹಾಗೂ ಸಂಪರ್ಕ ರಸ್ತೆಗಳ ನಿರ್ಮಾಣ
* **ಮಹಾನ್ ಬೆಂಗಳೂರು ಸಂಸ್ಥಾನ**- ಬೆಂಗಳೂರಿನ ಕಳೆದು ಹೋದ ವೈಭವವನ್ನು ಸಮರ್ಥ ಆಡಳಿತದ ಮೂಲಕ ಮರುಸ್ಥಾಪಿಸುವ ನಿಟ್ಟಿನಲ್ಲಿ ವಿವಿಧ ಕ್ಷೇತ್ರಗಳ ತಜ್ಞರು, ಉದ್ಯಮಿಗಳು, ಪರಿಸರ ತಜ್ಞರು, ಆರ್ಥಿಕ ತಜ್ಞರನ್ನು ಒಳಗೊಂಡ ನಗರ ಆಡಳಿತ ವ್ಯವಸ್ಥೆ ರಚನೆ
* ಎಲ್ಲಾ ನಿವಾಸಿಗಳ ಸುಸ್ಥಿರ ಮತ್ತು ಯೋಜನಾಬದ್ಧ ಬೆಂಗಳೂರಿಗಾಗಿ ಪರಿಷ್ಕೃತ 2042ರ ಸಮಗ್ರ ಯೋಜನೆ
* ನಗರದ ಮೂಲಸೌಲಭ್ಯಗಳ ಸುಧಾರಣೆ, ನಿರ್ವಹಣೆಗೆ ಏಕೀಕೃತ ವ್ಯವಸ್ಥೆ
* ಬಿಎಂಆರ್‌ಡಿಎ ಪ್ರದೇಶಗಳ ಅಭಿವೃದ್ಧಿಗೆ ವಿಶೇಷ ಆದ್ಯತೆ
* ಬಾಕಿ ಉಳಿದಿರುವ ಮೆಟ್ರೊ ಹಂತಗಳನ್ನು ಅಧಿಕಾರಕ್ಕೆ ಬಂದ ಒಂದು ವರ್ಷದೊಳಗೆ ಮತ್ತು ಮುಂದಿನ 5 ವರ್ಷದೊಳಗೆ 3 ಮತ್ತು 4ನೇ ಹಂತದ ಯೋಜನೆಗಳ ಅನುಮತಿ ಮತ್ತು ಪೂರ್ಣಗೊಳಿಸಲು ಯತ್ನ ಮತ್ತು ತುಮಕೂರಿನ ವಸಂತ ನರಸಾಪುರದ ಕೈಗಾರಿಕಾ ಕೇಂದ್ರದವರೆಗೆ ಮೆಟ್ರೊ ರೈಲ್ವೆ ವಿಸ್ತರಣೆಗೆ ಕ್ರಮ
* ಘನತ್ಯಾಜ್ಯ ನಿರ್ವಹಣೆಗಾಗಿ ಪ್ರತ್ಯೇಕ ವೈಜ್ಞಾನಿಕ ಯೋಜನೆ ಮತ್ತು  ಕಸದಿಂದ ಉತ್ಪತ್ತಿಯಾಗುವ ತ್ಯಾಜ್ಯದ ಪ್ರಮಾಣ ತಗ್ಗಿಸಲು ಪ್ರತಿ ಹತ್ತು ವಾರ್ಡ್‌ಗಳಿಗೊಂದರಂತೆ ತ್ಯಾಜ್ಯ ನಿರ್ವಹಣೆ ಮತ್ತು ಮರುಸಂಸ್ಕರಣೆ ಘಟಕ ಸ್ಥಾಪನೆ
* ನಗರದೆಲ್ಲೆಡೆ ಸಂಪರ್ಕ ಕಲ್ಪಿಸಲು ಇ-ರಿಕ್ಷಾಗಳ ಅಳವಡಿಕೆ
* ಬೆಂಗಳೂರಿನ ಕೆರೆಗಳ ಸ್ವಚ್ಛತೆ ಮತ್ತು ಪುನರುಜ್ಜೀವನಕ್ಕಾಗಿ ತ್ವರಿತ ಕಾರ್ಯಕ್ರಮ ಜಾರಿ. ಮುಂದಿನ 5 ವರ್ಷಗಳಲ್ಲಿ ಜಲ ಕ್ರೀಡೆಗಾಗಿ ನೀಲ ನಕ್ಷೆ ತಯಾರಿ
* ತ್ಯಾಜ್ಯ ನೀರನ್ನು ಸಂಸ್ಕರಿಸಿ ಶೇ 100ರಷ್ಟು ಪೂರೈಕೆ ಹಾಗೂ ಕುಡಿಯಲು ಹೊರತಾದ ಇತರ ಬಳಕೆಗೆ ಮರುಬಳಕೆಯ ನೀರು ಪೂರೈಕೆ
* ಬೆಂಗಳೂರಿನ ಕೆಂಪೇಗೌಡ ವಿಮಾನನಿಲ್ದಾಣದ ಬಳಿ ಅಂತರರಾಷ್ಟ್ರೀಯ ಮಟ್ಟದ ಸಮ್ಮೇಳನ ಕೇಂದ್ರ ನಿರ್ಮಾಣ

ಕಾಂಗ್ರೆಸ್ ಬರಲಿದೆ. ಪ್ರಗತಿ ತರಲಿದೆ.

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ

## ವಿಧಾನ ಸಭಾ ಚುನಾವಣೆ ಕರ್ನಾಟಕ

# ಪ್ರಣಾಳಿಕೆ-2023





## ಸರ್ವ ಜನಾಂಗದ ಶಾಂತಿಯ ತೋಟ

### ಕಾಂಗ್ರೆಸ್ ಗ್ಯಾರಂಟಿ - 1



ಗೃಹ ಜ್ಯೋತಿ

ಪ್ರತಿ ಮನೆಗೂ ಪ್ರತಿ ತಿಂಗಳು

**200** ಯುನಿಟ್ ವಿದ್ಯುತ್ ಉಚಿತ

**ಗೃಹ ಜ್ಯೋತಿ**

### ಕಾಂಗ್ರೆಸ್ ಗ್ಯಾರಂಟಿ - 2

**ಗೃಹ ಲಕ್ಷ್ಮಿ**

ಕುಟುಂಬದ ಮಹಿಳೆಗೆ ಪ್ರತಿ ತಿಂಗಳು

**₹ 2000**

ರೂಪಾಯಿ ಉಚಿತ

(24000 ರೂಪಾಯಿ ಪ್ರತಿ ವರ್ಷ)

### ಕಾಂಗ್ರೆಸ್ ಗ್ಯಾರಂಟಿ - 3

**ಅನ್ನಭಾಗ್ಯ**




ಪ್ರತಿ ತಿಂಗಳು ವ್ಯಕ್ತಿಗೆ

ಅಕ್ಕಿ ಉಚಿತ

### ಕಾಂಗ್ರೆಸ್ ಗ್ಯಾರಂಟಿ - 4

**ಯುವ ನಿಧಿ**

ಪ್ರತಿ ತಿಂಗಳು ನಿರುದ್ಯೋಗ ಭತ್ಯೆ

**₹3000** ಪದವೀಧರರಿಗೆ

**₹1500** ಡಿಪ್ಲೋಮಾ ಪದವೀಧರರಿಗೆ

### ಕಾಂಗ್ರೆಸ್ ಗ್ಯಾರಂಟಿ - 5

**ಶಕ್ತಿ**

ಎಲ್ಲಾ ಮಹಿಳೆಯರಿಗೆ ಸರ್ಕಾರಿ ಬಸ್‌ಗಳಲ್ಲಿ ಉಚಿತ ಪ್ರಯಾಣ

